ಸಂಪಾದಕರು : ಎಂ.ಎಸ್. ವಿಕಾಸ್

ಶುಕ್ರವಾರ, ಏಪ್ರಿಲ್ 26, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 345 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999


# 10 All India Ranks Below 1000

# Congratulations to the toppers of SIR MV JEE (Mains) 2024

## 363 Students qualified in JEE mains from single campus

AIR 41 SAGARIKA U. M.
AIR 99 SHREYAS B.
AIR 227 YASHAVANTHA KUMAR H.
AIR 263 SHREYAS S. N.
AIR 310 CHIRAG R.
AIR 317 TEJASWINI C. M.
AIR 391 PRIYANKA H.
AIR 690 K. VIDYA
AIR 874 PRAJWAL KUMAR B.
AIR 998 VINAY D. V.

## More than 172 students secured 93+ percentile from Single Campus

99.94 VINAY D. V.
99.54 REHAAN
99.53 AMITAASH RAO
99.51 KOTRESH
99.49 SANJAY H.
99.45 AMSHIK G.A.
99.42 ROHAN G.
99.37 RISHI R. K.
99.35 SAGARIKA
99.29 VISHWAS
99.28 NITHYASHREE
99.24 TEJAS K. S.
99.20 Y. VINAY
99.17 NAVEEN G.
99.16 H. RAGHAVA
99.15 GOURI S. N.
99.15 VIKAS D.M.
99.14 SUMANTH
99.00 GOWTHAM
99.00 Md. SUHAIL
98.95 SHREYAS
98.76 DUSHYANTH
98.71 ANANYA
98.67 VINAYKUMAR
98.58 RAVINDRANATH REDDY
98.52 ADIL AHMED
98.48 KARTHIK
98.48 KRUTHI B. M.
98.38 SHREYAS
98.33 AMRUTHA
98.23 BHUMIKA
98.19 SPANDANA
98.16 HRUTHIK
98.01 SUJAN S. H.
97.93 SANKALP
97.93 RUTVIKA
97.87 NANDINI
97.82 YASHAVANTHA
97.80 RAKSHITHA

### Subject wise highest percentile

Physics 100
Chemistry 100
100 Physics 4, 100 Chemistry 1
Maths 99.94

97.79 PRAJWAL
97.67 SHARANABASAVA
97.67 YUVARAJ
97.66 SHASHIDHAR
97.60 MANOJ Y.
97.58 TELU RAM SAMPATH KUMAR
97.57 NARESH K.
97.53 SPOORTHY
97.46 SWAROOP
97.44 BHOOMIKA
97.38 AKASH
97.38 SAMPRITH
97.36 SANJANA
97.29 BABU PATEL
97.25 BHARATH
97.24 CHARAN KUMAR
97.20 MAHALINGAYYA
97.15 SRUSHTI
97.15 CHIRAAG
97.15 SUMITH
97.13 SANTHOSH
97.10 TEJASWINI
97.04 TANVI AAZMI
97.01 BHUMIKA
97.00 SHREYAS
96.92 KOUSTHUB
96.78 SHLOK NIKHIL B.
96.63 ANU M. N.
96.60 PRIYANKA G.
96.55 PRIYANKA H.
96.55 SRIHARI N.
96.53 TEJAS S.
96.51 SOUJANYA
96.47 SARA K. M.
96.38 KOUSHIK
96.38 MEGHARAJA
96.37 KARAN H.
96.34 SANJANA
96.24 ADARSHA
96.24 YASHAS
96.23 SANGAMESHWARA SWAMY
96.22 ADARSH
96.22 POOJA N. B.
96.12 BHIMAMBIKA
96.11 PUNYA S. B.
96.09 VAMSHITA
96.09 VIKAS K. S.
96.09 THIPPESWAMY
96.07 RAKSHITHA

And Many More...

99 Percentile & above 20 Students
98 Percentile & above 34 Students
97 Percentile & above 64 Students
96 Percentile & above 88 Students
95 Percentile & above 115 Students
90 Percentile & above 210 Students

Below 50 Ranks 1 Students
Below 100 Ranks 2 Students
Below 500 Ranks 7 Students
Below 1000 Ranks 10 Students
Below 1500 Ranks 15 Students
Below 2000 Ranks 21 Students
Below 5000 Ranks 42 Students
Below 10000 Ranks 67 Students
Below 15000 Ranks 108 Students
Below 20000 Ranks 138 Students

# SIR M V GROUP OF INSTITUTIONS

- Hadadi Road, DAVANGERE-5. Ph: 08192-261200, 92433 12223, 88610 44569, 87221 41400.
- St. JOHN'S SCIENCE PU COLLEGE, Shivakumara Swamy Badavane, H.R.B. Layout, DAVANGERE-05.
- Sri Basaveshwara Science & Commerce PU College, Lokikere Road, S A Ravindranatha Nagar, DAVANGERE-05

# 275 ರಷ್ಟು ಅಭ್ಯರ್ಥಿಗಳೇ ಇಲ್ಲದ ಕಾಂಗ್ರೆಸ್ ಕೇಂದ್ರದಲ್ಲಿ ಆಡಳಿತ ನಡೆಸುವುದು ಹೇಗೆ ?



## ರಾಣೇಬೆನ್ನೂರಿನ ಮಹಿಳಾ ಸಮ್ಮೇಳನದಲ್ಲಿ ಚಿತ್ರ ನಟಿ ತಾರಾ ಪ್ರಶ್ನೆ

ರಾಣೇಬೆನ್ನೂರು, ಏ. 25 - ಕೇಂದ್ರದಲ್ಲಿ ಸರ್ಕಾರ ರಚಿಸಲು ಸರಳ ಬಹುಮತಕ್ಕೆ 275 ರಷ್ಟು ಲೋಕಸಭಾ ಸದಸ್ಯರ ಅವಶ್ಯಕತೆ ಇದೆ. ಆದರೆ ಕಾಂಗ್ರೆಸ್ ಸ್ಪರ್ಧೆ ಮಾಡಿರುವುದು ಕೇವಲ 250 ಕ್ಷೇತ್ರಗಳಲ್ಲಿ ಮಾತ್ರ ಹೀಗಿದ್ದು ಅದ್ಹೇಗೆ ರಾಹುಲ್‌ಗಾಂಧಿ ಪ್ರಧಾನಿ ಆಗ್ತಾರೆ ? ಎಂದು ಪ್ರಶ್ನೆ ಮಾಡುವುದರ ಜೊತೆ ಸುಳ್ಳು ಹೇಳುವವರು ಬಿಜೆಪಿ ನಾಯಕರಲ್ಲ, ಕಾಂಗ್ರೆಸ್ ನಾಯಕರು ಎಂದು ಹಿರಿಯ ಚಿತ್ರ ನಟಿ ತಾರಾ ಸ್ಪಷ್ಟೀಕರಿಸಿದರು.

ರಾಣೇಬೆನ್ನೂರು ಬಿಜೆಪಿ ಕಾರ್ಯಾಲಯದಲ್ಲಿ ಮೊನ್ನೆ ನಡೆದ ಮಹಿಳಾ ಸಮ್ಮೇಳನದಲ್ಲಿ ನೆರೆದಿದ್ದ ಬೃಹತ್ ಸಂಖ್ಯೆಯ ಮಹಿಳೆಯರನ್ನುದ್ದೇಶಿಸಿ ಅವರು ಮಾತನಾಡಿದರು.

ವಿದೇಶಕ್ಕೆ ತೆರಳಲು ಪ್ರಧಾನ ಮಂತ್ರಿಗಳಿಗೆ ವೀಸಾ ದೊರಕದ ಸ್ಥಿತಿ ಹಿಂದೆ ಭಾರತದಲ್ಲಿತ್ತು. ತಮ್ಮ ದೇಶಕ್ಕೆ ಬರುವ ಭಾರತದ ಪ್ರಧಾನಿಗಳನ್ನು ವಿದೇಶಿಗರು ಭಿಕ್ಷುಕರಂತೆ ಕಾಣುತ್ತಿದ್ದರು. ಆದರೆ, ಈಗ ನಮ್ಮ ಪ್ರಧಾನಿಗಳನ್ನು ರತ್ನಗಂಬಳಿ ಹಾಸಿ ಕರೆಯುವಂತಹ ಬದಲಾವಣೆಯನ್ನು ಮೋದಿ ತಂದಿದ್ದಾರೆ. ಅಭಿವೃದ್ಧಿ ಹಾಗೂ ಆರ್ಥಿಕ ಸುಭದ್ರತೆಯಲ್ಲಿ 11 ನೇ ಸ್ಥಾನದಲ್ಲಿದ್ದ ಭಾರತವನ್ನು 7 ನೇ ಸ್ಥಾನಕ್ಕೆ ತಂದಿದ್ದಾರೆ. ಈಗ ಮತ್ತೆ ಅಧಿಕಾರ ಕೊಟ್ಟರೆ 3 ನೇ ಸ್ಥಾನಕ್ಕೆ ತರಲಿದ್ದಾರೆ ಎಂದು ತಾರಾ ಹೇಳಿದರು.

ದೇಶದ ಜನತೆ ಮತ್ತೆ ಬಿಜೆಪಿಗೆ ಆಶೀರ್ವದಿಸಲಿದ್ದಾರೆ. ಮೋದಿ ಮೂರನೇ ಬಾರಿಗೆ ಪ್ರಧಾನಿ ಆಗಲಿದ್ದಾರೆ. ಅಭಿವೃದ್ಧಿಯ ಕನಸು ಕಾಣುತ್ತಿರುವ ಹಾವೇರಿ - ಗದಗ ಲೋಕಸಭೆ ಅಭ್ಯರ್ಥಿ ಬಸವರಾಜ ಬೊಮ್ಮಾಯಿ ಕೇಂದ್ರದಲ್ಲಿ ಮಂತ್ರಿಯಾಗುವುದು ಸೂರ್ಯೋದಯದಷ್ಟೇ ಸತ್ಯ ಎಂದು ಮಾಜಿ ಮಂತ್ರಿ ಬಿ.ಸಿ. ಪಾಟೀಲ ವಿಶ್ವಾಸ ವ್ಯಕ್ತಪಡಿಸಿದರು.

ಬಸವರಾಜ ಬೊಮ್ಮಾಯಿ ಪತ್ನಿ ಚೆನ್ನಮ್ಮ, ಕಾರವಾರ ಪ್ರಭಾರಿ ಭಾರತಿ ಜಂಬಗಿ, ಜಿ.ಪಂ. ಮಾಜಿ ಸದಸ್ಯರಾದ ಮಂಗಳಗೌರಿ ಪೂಜಾರ, ಜಿಲ್ಲಾ ಅಧ್ಯಕ್ಷರಾದ ಅರುಣಕುಮಾರ ಪೂಜಾರ, ಸೃಷ್ಟಿ ಪಾಟೀಲ, ರಾಜ್ಯ ಕಾರ್ಯದರ್ಶಿ ಶೋಭಾ ನಿಸ್ಸೀಮಗೌಡ್ರ, ಭಾರತಿ ಅಳವಂಡಿ ಮತ್ತಿತರರಿದ್ದರು.

## ಪ್ರಣಾಳಿಕೆ ವಿವರಣೆಗೆ ಪ್ರಧಾನಿಗೆ ಸಮಯ ಕೇಳಿದ ಖರ್ಗೆ

ನವದೆಹಲಿ, ಏ. 25 – ಕಾಂಗ್ರೆಸ್ ಪಕ್ಷದ ಪ್ರಣಾಳಿಕೆ ಬಗ್ಗೆ ಖುದ್ದು ವಿವರಿಸಲು ಸಮಯ ನೀಡುವಂತೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪತ್ರ ಬರೆದಿದ್ದಾರೆ. ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಾದ ನ್ಯಾಯ ಪತ್ರದಲ್ಲಿ ಇಲ್ಲದ ವಿಷಯಗಳ ಬಗ್ಗೆ ನಿಮ್ಮ ಸಲಹೆಗಾರರು ತಪ್ಪು ಮಾಹಿತಿ ನೀಡಿದ್ದಾರೆ ಎಂದು ಖರ್ಗೆ ಪತ್ರದಲ್ಲಿ ಹೇಳಿದ್ದಾರೆ.

ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಸಂಪನ್ಮೂಲ ಮರು ಹಂಚಿಕೆಯ ಪ್ರಸ್ತಾಪ ಇದೆ. ಮುಸ್ಲಿಮರಿಗೆ ಆಸ್ತಿ ಮರು ಹಂಚಿಕೆ ಮಾಡಲಾಗುತ್ತದೆ. ಮಹಿಳೆಯರ ಮಂಗಳಸೂತ್ರವನ್ನೂ ಅರ್ಬನ್ ನಕ್ಸಲರು ಬಿಡುವುದಿಲ್ಲ ಎಂದು ಪ್ರಧಾನಿ ಹೇಳಿದ್ದರು. ಕೆಲ ಪದಗಳನ್ನು ಹಿಡಿದು, ಅದನ್ನು ಮೂಲ ಅರ್ಥಕ್ಕೆ ಮೀರಿ ವ್ಯಾಖ್ಯಾನಿಸುವುದು ನಿಮ್ಮ ಅಭ್ಯಾಸದಂತಾಗಿದೆ. ನೀವು ಈ ರೀತಿ ಮಾತನಾಡುವ ಮೂಲಕ ಪ್ರಧಾನಿ ಹುದ್ದೆಯ ಘನತೆ ತಗ್ಗಿಸುತ್ತಿದ್ದೀರಿ ಎಂದೂ ಖರ್ಗೆ ಹೇಳಿದ್ದಾರೆ.

# ಚುನಾವಣಾ ರಜೆ ಮತದಾನಕ್ಕೆ ಬಳಸಿ



### ನ್ಯಾ. ರಾಜೇಶ್ವರಿ

ದಾವಣಗೆರೆ, ಏ.25- ಮತದಾನಕ್ಕೆ ಮೀಸಲಾದ ರಜೆ ಮೋಜು ಮಸ್ತಿಗೆ ಬಳಸಿಕೊಳ್ಳದೇ ಕಡ್ಡಾಯವಾಗಿ ಮತ ಚಲಾಯಿಸಿ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ತಿಳಿಸಿದರು.

ನಗರದ ಎಸ್.ಬಿ.ಸಿ ಕಾಲೇಜಿನಲ್ಲಿ ಗುರುವಾರ ಹಮ್ಮಿಕೊಂಡಿದ್ದ ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹಲವು ವರ್ಷಗಳ ಹಿಂದೆ ಮಹಿಳೆಯರಿಗೆ ಮತದಾನ ಮಾಡಲು ಹಕ್ಕೇ ಇರಲಿಲ್ಲ. ಇಂದು ಎಲ್ಲರಿಗೂ ಸ್ವಾತಂತ್ರ್ಯವಿದೆ, ಮತದಾನದ ಹಕ್ಕೂ ಇದೆ. ಆದ್ದರಿಂದ ನಿಮ್ಮ ಅಮೂಲ್ಯವಾದ ಮತ ಸದೃಢ ದೇಶ ಕಟ್ಟಲು ಅಡಿಗಲ್ಲು ಆಗಬೇಕು ಎಂದು ಹೇಳಿದರು.

ನಮ್ಮದು ಪ್ರಜಾಪ್ರಭುತ್ವ ದೇಶ, ನಮ್ಮ ನಾಯಕರನ್ನು ಆಯ್ಕೆ ಮಾಡಿಕೊಳ್ಳಲು ನಮಗೆ ಸಂಪೂರ್ಣ ಅಧಿಕಾರವಿದೆ ಆದ್ದರಿಂದ ನಿರ್ಭೀತಿಯಿಂದ ಮೇ 7ಕ್ಕೆ ಮತದಾನ ಮಾಡುವಂತೆ ಹೇಳಿದರು.

ನಾನೊಬ್ಬ ಮತ ಚಲಾಯಿಸ ದಿದ್ದರೆ ಏನಾಗುತ್ತೆ ಎನ್ನುವ ಮನಸ್ಥಿತಿ ಬದಲಿಸಿ ಆಸೆ, ಆಮಿಷಕ್ಕೆ ತುತ್ತಾಗದೇ ಮತದಾನ ಮಾಡುವ ಮೂಲಕ ಇತರರನ್ನೂ ಜಾಗೃತಗೊಳಿಸಿ ಎಂದು ಹೇಳಿದರು.

ವಿದ್ಯಾರ್ಥಿಗಳು ಹೆಚ್ಚೆಚ್ಚು ಓದುವ ಮೂಲಕ ದೇಶಕ್ಕೆ ಉತ್ತಮ ನಾಗರಿಕರಾಗಿ. ಯಾರಿಗಾದರೂ ತೊಂದರೆ, ಅನ್ಯಾಯವಾಗಿದ್ದರೆ ಕಾನೂನಿನ ಮೂಲಕ ಬಗೆಹರಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಇದೇ ವೇಳೆ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಕಾಲೇಜಿನ ಪ್ರಾಚಾರ್ಯ ಡಾ. ಕೆ. ಷಣ್ಮುಖ, ಹಿರಿಯ ವಕೀಲರಾದ ಎಲ್. ದಯಾನಂದ, ಬಿ.ಜಿ. ಗೀತಾ ಪಾಟೀಲ್, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳಿದ್ದರು.

## ಸಂಕ್ಷಿಪ್ತ ಸುದ್ದಿ

☞ **ನ್ಯಾಯಾಂಗದ ಒಂದು ವರ್ಗದಿಂದ ಬಿಜೆಪಿ ಜೊತೆ 'ಫಿಕ್ಸಿಂಗ್' : ತೃಣಮೂಲ ನಾಯಕನ ಆರೋಪ**

ಟಮ್ಲುಕ್ : ನ್ಯಾಯಾಂಗದ ಒಂದು ವರ್ಗ ಬಿಜೆಪಿ ಜೊತೆ ಆದೇಶಗಳ ಫಿಕ್ಸಿಂಗ್ ಮಾಡಿಕೊಂಡು, ಆ ಪಕ್ಷದ ರಾಜಕೀಯ ಅಜೆಂಡಾಗೆ ಅನುಗುಣವಾಗಿ ಆದೇಶ ಹೊರಡಿಸುತ್ತಿದೆ ಎಂದು ತೃಣಮೂಲ ಕಾಂಗ್ರೆಸ್ ನಾಯಕ ಅಭಿಷೇಕ್ ಬ್ಯಾನರ್ಜಿ ಆರೋಪಿಸಿದ್ದಾರೆ.

☞ **ಮೀಸಲಾತಿ ರಕ್ಷಿಸಲು 400 ಸೀಟು ಕೊಡಿ : ಮೋದಿ**

ನವದೆಹಲಿ : ಪ್ರತಿಪಕ್ಷಗಳು ದಲಿತರು ಹಾಗೂ ಇತರೆ ಹಿಂದುಳಿದ ವರ್ಗಗಳ ಮೀಸಲಾತಿ ಕಸಿಯಲು ಬಯಸಿವೆ. ಮೀಸಲಾತಿ ರಕ್ಷಿಸಲು ಬಿಜೆಪಿಗೆ ಲೋಕಸಭೆಯಲ್ಲಿ 400ಕ್ಕೂ ಹೆಚ್ಚು ಸ್ಥಾನಗಳನ್ನು ನೀಡುವಂತೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.

☞ **ಮೋದಿಯಿಂದ ನೀತಿ ಸಂಹಿತೆ ಉಲ್ಲಂಘನೆ ದೂರು; ನಡ್ಡಾಗೆ ನೋಟಿಸ್**

ನವದೆಹಲಿ : ಪ್ರಧಾನ ಮಂತ್ರಿ ನರೇಂದ್ರ ಮೋದಿ ವಿರುದ್ಧ ದಾಖಲಾಗಿರುವ ನೀತಿ ಸಂಹಿತೆ ಉಲ್ಲಂಘನೆ ದೂರಿಗೆ ಸಂಬಂಧಿಸಿದಂತೆ ಮೊದಲ ಕ್ರಮ ತಗೆದುಕೊಂಡಿರುವ ಚುನಾವಣಾ ಆಯೋಗ, ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾಗೆ ನೋಟಿಸ್ ಕಳಿಸಿದೆ. ರಾಜಸ್ಥಾನದ ಬನ್ಸವಾರಾದಲ್ಲಿ ವಿಭಜನಾತ್ಮಕ ಭಾಷಣ ಮಾಡಲಾಗಿದೆ ಎಂದು ಮೋದಿ ವಿರುದ್ಧ ದೂರು ದಾಖಲಿಸಲಾಗಿತ್ತು.

☞ **ಮೋದಿ 'ಅಸತ್ಯಮೇವ ಜಯತೆ'ಗೆ ಉದಾಹರಣೆ : ಕಾಂಗ್ರೆಸ್**

ನವದೆಹಲಿ : ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಲೋಕಸಭಾ ಚುನಾವಣೆಯಲ್ಲಿ ನಿಜವಾದ ವಿಷಯಗಳನ್ನು ಮರೆಮಾಚಲು ಸುಳ್ಳು ಹೇಳುತ್ತಿದ್ದಾರೆ. ಮೋದಿ ಅವರು 'ಅಸತ್ಯಮೇವ ಜಯತೆ'ಗೆ ಉದಾಹರಣೆಯಾಗಿದ್ದಾರೆ ಎಂದು ಕಾಂಗ್ರೆಸ್ ಟೀಕಿಸಿದೆ.

☞ **ಭಾರತೀಯ ಉಚ್ಚಾಯೋಗದ ಮೇಲಿನ ದಾಳಿಯ ಪ್ರಮುಖ ಆರೋಪಿ ಬಂಧನ**

ನವದೆಹಲಿ : ಕಳೆದ ವರ್ಷ ಮಾರ್ಚ್‌ನಲ್ಲಿ ಲಂಡನ್‌ನಲ್ಲಿರುವ ಭಾರತೀಯ ಉಚ್ಚಾಯೋಗದ ಮೇಲೆ ನಡೆಸಲಾದ ದಾಳಿಗೆ ಸಂಬಂಧಿಸಿದಂತೆ ಪ್ರಮುಖ ಆರೋಪಿಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್.ಐ.ಎ.) ಬಂಧಿಸಿದೆ.

☞ **ಸ್ತ್ರೀಧನದ ಮೇಲೆ ಗಂಡನಿಗೆ ನಿಯಂತ್ರಣವಿಲ್ಲ : ಸುಪ್ರೀಂ ಕೋರ್ಟ್**

ನವದೆಹಲಿ : ಸ್ತ್ರೀಧನದ ಮೇಲೆ ಗಂಡನಿಗೆ ಯಾವುದೇ ನಿಯಂತ್ರಣ ಇಲ್ಲ. ಸಂಕಷ್ಟದ ಸಮಯದಲ್ಲಿ ಸ್ತ್ರೀಧನ ಬಳಸಿಕೊಳ್ಳಬಹುದಾದರೂ, ನಂತರ ಅದನ್ನು ಪತ್ನಿಗೆ ಮರಳಿಸುವುದು ನೈತಿಕ ಹೊಣೆಗಾರಿಕೆಯಾಗಿದೆ ಎಂದು ಸುಪ್ರೀಂ ಕೋರ್ಟ್ ಪ್ರಕರಣವೊಂದರಲ್ಲಿ ತೀರ್ಪು ನೀಡಿದೆ.

☞ **ರಾಹುಲ್ ಹೇಳಿಕೆ, ಖರ್ಗೆಗೆ ನೋಟಿಸ್**

ನವದೆಹಲಿ : ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 'ಒಂದು ದೇಶ, ಒಂದು ಭಾಷೆ, ಒಂದು ಧರ್ಮ' ಪ್ರತಿಪಾದಿಸುತ್ತಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿರುವುದಕ್ಕಾಗಿ, ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಚುನಾವಣಾ ಆಯೋಗ ನೋಟಿಸ್ ಕಳಿಸಿದೆ. ರಾಹುಲ್ ಗಾಂಧಿ ಅವರು ಪ್ರಧಾನಿ ವಿರುದ್ಧ ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ಬಿಜೆಪಿ ದೂರು ಸಲ್ಲಿಸಿತ್ತು.

## ನವಭಾರತ ಸೇನಾದ ಶ್ರೀಕಾಂತ್ ಪ್ರಚಾರ



ದಾವಣಗೆರೆ, ಏ. 25- ನವಭಾರತ ಸೇನಾ ಪಕ್ಷದ ಅಭ್ಯರ್ಥಿ ಎಂ.ಜಿ. ಶ್ರೀಕಾಂತ್ ಜಗಳೂರು ವಿಧಾನಸಭಾ ಕ್ಷೇತ್ರದ ಬಿಳಿಚೋಡು ಗ್ರಾಮದಲ್ಲಿ ಮತಯಾಚನೆ ಮಾಡಿದರು.

# ಡಾ. ಪ್ರಭಾ ದಾವಣಗೆರೆಯ ಘನತೆ ಹೆಚ್ಚಿಸುವರು

## ಕಾಂಗ್ರೆಸ್ ಅಭ್ಯರ್ಥಿ ಪ್ರಭಾ ಪರ ಪ್ರಚಾರದಲ್ಲಿ ಮಾಜಿ ಸಂಸದ ಕೆ.ಸಿ. ಕೊಂಡಯ್ಯ



ದಾವಣಗೆರೆ, ಏ. 25 - ದಾವಣಗೆರೆ ಇನ್ನಷ್ಟು ಅಭಿವೃದ್ಧಿಯಾಗಬೇಕೆಂದರೆ ದಾವಣಗೆರೆ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಗೆಲ್ಲಿಸುವಂತೆ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಮನವಿ ಮಾಡಿದರು.

ಮಹಾನಗರ ಪಾಲಿಕೆಯ 10ನೇ ವಾರ್ಡ್‌ನಲ್ಲಿ ಇಂದು ಏರ್ಪಾಡಾಗಿದ್ದ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಪ್ರಭಾ ಮಲ್ಲಿಕಾರ್ಜುನ್ ವಿದ್ಯಾವಂತೆಯಾಗಿರುವುದರಿಂದ ಕೇಂದ್ರದಿಂದ ಹೆಚ್ಚಿನ ಅನುದಾನ ತಂದು ಇನ್ನಷ್ಟು ಅಭಿವೃದ್ಧಿಗೆ ಒತ್ತು ನೀಡುವರು ಎಂದರು.

ಕಾಂಗ್ರೆಸ್ ಪಕ್ಷ ನುಡಿದಂತೆ ನಡೆದಿದೆ ಎಂಬುದನ್ನು ನಾವು ಸಾಬೀತುಪಡಿಸಿದ್ದೇವೆ. ನಮ್ಮ ಸರ್ಕಾರ ಭರವಸೆಯನ್ನು ಈಡೇರಿಸಿದ ತೃಪ್ತಿ ಹೊಂದಿದ್ದು, ನಾವುಗಳು ಮತ್ತಷ್ಟು ಸ್ಫೂರ್ತಿಯಿಂದ ಕೆಲಸ ಮಾಡಲು ನಿಮ್ಮಗಳ ಬೆಂಬಲ ಅವಶ್ಯಕತೆ ಇದ್ದು, ನೀವುಗಳು ನಮಗೆ ಹೆಚ್ಚಿನ ಮತಗಳನ್ನು ನೀಡುವ ಮೂಲಕ ನಮ್ಮನ್ನು ಬೆಂಬಲಿಸಿ ಎಂದರು.

ಮಾಜಿ ಸಂಸದ ಕೆ.ಸಿ.ಕೊಂಡಯ್ಯ ಮಾತನಾಡಿ, ಪ್ರಭಾ ಮಲ್ಲಿಕಾರ್ಜುನ್ ಅವರು ಎಸ್.ಎಸ್.ಟ್ರಸ್ಟ್ ಮೂಲಕ ಸಾಮಾಜಿಕ ಸೇವೆ ಮಾಡುತ್ತಾ ಬಂದಿದ್ದು, ಅವರಿಗೆ ಜನರ ಸಂಕಷ್ಟ ಅರ್ಥ ಮಾಡಿಕೊಳ್ಳುವ ಗುಣ ಇದ್ದು, ಅವರನ್ನು ನೀವು ಬಹುಮತದಿಂದ ಗೆಲ್ಲಿಸಿದರೆ, ದಾವಣಗೆರೆ ಘನತೆಯನ್ನು ಹೆಚ್ಚಿಸುವರು ಎಂದರು.

ವಾರ್ಡ್‌ನ ಮುಖಂಡ ಸತೀಶ್ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್, ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷರಾದ ಅನಿತಾಬಾಯಿ, ದೂಡಾ ಮಾಜಿ ಅಧ್ಯಕ್ಷ ಮಾಲತೇಶ್ ರಾವ್, ಮೇಯರ್ ವಿನಾಯಕ ಪೈಲ್ವಾನ್, ಮಹಾನಗರ ಪಾಲಿಕೆ ಸದಸ್ಯ ಸೋಗಿ ಶಾಂತಕುಮಾರ್, ಕಾಂಗ್ರೆಸ್ ಮುಖಂಡ ಬಾಬುರಾವ್ ಸಾಳಂಕಿ, ಮಹಿಳಾ ಕಾಂಗ್ರೆಸ್‌ನ ಮಂಜಮ್ಮ, ಉಮೇಶ್ ರಾವ್ ಸಾಳಂಕಿ, ಗೌಡ್ರು ಚನ್ನಬಸಪ್ಪ, ಕ್ಯಾಪ್ಟನ್ ನಾಗರಾಜ್, ಗುರುರಾಜ್, ಮರಿಯಪ್ಪ ಮತ್ತಿತರರಿದ್ದರು.

## ಆಸ್ತಿ ಉಳಿಸಿಕೊಳ್ಳಲು ರಾಜೀವ್ ಗಾಂಧಿ ತೆರಿಗೆ ರದ್ದುಗೊಳಿಸಿದ್ದರು

### ಪ್ರಧಾನ ಮಂತ್ರಿ ಮೋದಿ ಆರೋಪ

ಮೊರೆನಾ, ಏ. 25 – ಆಸ್ತಿ ಉಳಿಸಿಕೊಳ್ಳಲು ಆಗಿನ ಪ್ರಧಾನ ಮಂತ್ರಿ ರಾಜೀವ್ ಗಾಂಧಿ ಪಿತ್ರಾರ್ಜಿತ ಆಸ್ತಿ ತೆರಿಗೆ ತೆಗೆದು ಹಾಕಿದ್ದರು. ಈಗ ಕಾಂಗ್ರೆಸ್ ಮತ್ತೆ ಅದೇ ತೆರಿಗೆ ಜಾರಿಗೆ ತರಲು ಹೊರಟಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಆರೋಪಿಸಿದ್ದಾರೆ.

ಚುನಾವಣಾ ಸಮಾವೇಶದಲ್ಲಿ ಮತ್ತೆ ಪಿತ್ರಾರ್ಜಿತ ಆಸ್ತಿ ತೆರಿಗೆ ವಿಷಯ ಪ್ರಸ್ತಾಪಿಸಿರುವ ಮೋದಿ, ಲೂಟಿ ಮಾಡುವ ಕಾಂಗ್ರೆಸ್ ಪಕ್ಷದ ಪ್ರಯತ್ನದಿಂದ ಜನರನ್ನು ರಕ್ಷಿಸುವುದಾಗಿ ಹೇಳಿದ್ದಾರೆ.

ಮಾಜಿ ಪ್ರಧಾನಿ ಇಂದಿರಾ ಗಾಂಧಿ ನಿಧನದ ನಂತರ, ಅವರ ಆಸ್ತಿ ಸರ್ಕಾರದ ಪಾಲಾಗುವುದನ್ನು ತಪ್ಪಿಸುವ ಸಲುವಾಗಿ ಪಿತ್ರಾರ್ಜಿತ ಆಸ್ತಿ ಮೇಲೆ ಹೇರಲಾಗುತ್ತಿದ್ದ ತೆರಿಗೆಯನ್ನು ಆಗಿನ ಪ್ರಧಾನ ಮಂತ್ರಿ ರಾಜೀವ್ ಗಾಂಧಿ ರದ್ದುಗೊಳಿಸಿದ್ದರು ಎಂದು ಮೋದಿ ಆರೋಪಿಸಿದರು.

## ಮಾಯಕೊಂಡ ಕ್ಷೇತ್ರದಲ್ಲಿ ಇಂದು ಕಾಂಗ್ರೆಸ್ ಅಭ್ಯರ್ಥಿ ಪ್ರಭಾ ಪ್ರವಾಸ



ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಮಾಯಕೊಂಡ ವಿಧಾನಸಭಾ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಇಂದು ಪ್ರವಾಸ ಕೈಗೊಳ್ಳುವರು.

ಲೋಕಿಕೆರೆ ಗ್ರಾಮದಿಂದ ಬೆಳಿಗ್ಗೆ 10 ರಿಂದ ಪ್ರಚಾರ ಆರಂಭಿಸುವ ಪ್ರಭಾ ಮಲ್ಲಿಕಾರ್ಜುನ್ ಶ್ಯಾಗಲೆ, ಹೂವಿನಮಡು, ಗೋಣಿವಾಡ, ಮತ್ತಿ, ಕದರನಹಳ್ಳಿ, ಅರೇಹಳ್ಳಿ, ತ್ಯಾವಣಿಗಿ, ಮೀಯಪುರ, ಗೋಮಾಳ, ನಲ್ಕುದುರೆ ಗೋಮಾಳ, ಅಶೋಕ ನಗರ. ಕ್ಯಾಂಪ್, ನಲ್ಕುದುರೆ, ನವಿಲೇಹಾಳ್, ದೊಡ್ಡಘಟ್ಟ, ಕಬ್ಬಳ, ಸೇವಾನಗರ, ಮಧುರನಾಯಕನಹಳ್ಳಿ, ಮಧುರನಾಯ್ಕನಹಳ್ಳಿ ತಾಂಡಾ, ಗುಡ್ಡದ ಕೊಮಾರನಹಳ್ಳಿ, ಹಾಲೇಶಪುರ, ಜಿ.ಬಿ. ಹಳ್ಳಿ, ನೀಲೋಗಲ್, ಕಂಚುಗಾರನಹಳ್ಳಿ ಗ್ರಾಮಗಳಲ್ಲಿ ರಾತ್ರಿ 7.30ರವರೆಗೆ ಮತಯಾಚನೆ ಮಾಡುವರು.

ಪ್ರಭಾ ಮಲ್ಲಿಕಾರ್ಜುನ್ ಅವರೊಂದಿಗೆ ಶಾಸಕ ಕೆ.ಎಸ್. ಬಸವಂತಪ್ಪ ಅವರು ಪ್ರಚಾರ ಕಾರ್ಯದಲ್ಲಿ ಭಾಗವಹಿಸುವರು ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಹನುಮಂತಪ್ಪ ಮತ್ತು ಬಿ.ಜಿ. ನಾಗರಾಜ್ ತಿಳಿಸಿದ್ದಾರೆ.

## ಭಾನುವಳ್ಳಿಯಲ್ಲಿ ಸಂಭ್ರಮದ ತೇರು



ಮಲೇಬೆನ್ನೂರು, ಏ. 25- ಭಾನುವಳ್ಳಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ರಥೋತ್ಸವವು ಬುಧವಾರ ಬೆಳಗ್ಗೆ ಗ್ರಾಮಸ್ಥರ ಸಮ್ಮುಖದಲ್ಲಿ ಸಂಭ್ರಮದಿಂದ ಜರುಗಿತು, ಗ್ರಾಮದ ಆರಾಧ್ಯ ದೈವ ಶ್ರೀ ನಾರಾಯಣ ಸ್ವಾಮಿ ದೇವಸ್ಥಾನಕ್ಕೆ ಶ್ರೀ ಆಂಜನೇಯ, ಶ್ರೀ ಬೀರಲಿಂಗೇಶ್ವರ, ಚಂದ್ರಗುತ್ಯಮ್ಮ, ಕರಿಯಮ್ಮ, ಕೆರೆ ಚೌಡೇಶ್ವರಿ, ದುರ್ಗಮ್ಮ ದೇವರುಗಳು ತೆರಳಿ ಪೂಜೆ ಸಲ್ಲಿಸಿ ಬಂದ ಮೇಲೆ ಆಂಜನೇಯ ಸ್ವಾಮಿ ಮೂರ್ತಿಯನ್ನು ರಥದಲ್ಲಿ ಇಟ್ಟು ರಥಕ್ಕೆ ಪೂಜೆ ಸಲ್ಲಿಸಿದ ನಂತರ ರಥೋತ್ಸವ ಆರಂಭಗೊಂಡಿತ್ತು. ಸಂಜೆ ನಡೆದ ಆಂಜನೇಯ ಸ್ವಾಮಿಯ ಮುಳ್ಳೋತ್ಸವದಲ್ಲಿ ಅಪಾರ ಭಕ್ತರು ಪಾಲ್ಗೊಂಡಿದ್ದರು. ಹರಕೆ ಹೊತ್ತ ಜನರು ಮುಳ್ಳು ತುಳಿದರು.

## ಮೇ 10 ರಿಂದ ವಿಪ್ರ ವಟು ಶಿಕ್ಷಣ ಶಿಬಿರ

ದಾವಣಗೆರೆ, ಏ. 25 - ತಾಲ್ಲೂಕು ಬ್ರಾಹ್ಮಣ ಸಮಾಜ ಸೇವಾ ಸಂಘದ ಆಶ್ರಯದಲ್ಲಿ ವಿಪ್ರ ವಟು ಶಿಕ್ಷಣ ಶಿಬಿರವನ್ನು ಮೇ 10 ರಿಂದ ಮೇ 19 ರವರೆಗೆ ಪ್ರತಿದಿನ ಬೆಳಿಗ್ಗೆ 7.30 ರಿಂದ ಸಂಜೆ 5.30 ರವರೆಗೆ ಆಯೋಜಿಸಲಾಗಿದೆ. ಅರ್ಜಿಯನ್ನು ಇದೇ ದಿನಾಂಕ 30 ರೊಳಗಾಗಿ ಬ್ರಾಹ್ಮಣ ವಿದ್ಯಾರ್ಥಿ ನಿಲಯದಲ್ಲಿ ಸಲ್ಲಿಸಬೇಕು ಎಂದು ವಿನಾಯಕ ಡಿ. ಜೋಶಿ (98441 30834), ಎಸ್. ಗೋಪಾಲದಾಸ್ ತಿಳಿಸಿದ್ದಾರೆ.

## ಕರುಣಾ ಟ್ರಸ್ಟಿನ ಒಂದು ತಿಂಗಳ ಮಜ್ಜಿಗೆ ವಿತರಣೆಯ ಮುಕ್ತಾಯ ಸಮಾರಂಭ

ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಿಂದ ಕಳೆದ 1 ತಿಂಗಳಿಂದ ನಡೆಸುತ್ತಿರುವ ಮಜ್ಜಿಗೆ ವಿತರಣಾ ಕಾರ್ಯಕ್ರಮದ ಮುಕ್ತಾಯ ಸಮಾರಂಭವು ಇಂದು ಬೆಳಿಗ್ಗೆ 11 ಗಂಟೆಗೆ ಚಿಗಟೇರಿ ಜಿಲ್ಲಾ ಆಸ್ಪತ್ರೆಯ ಮುಂಭಾಗದ ಸಿಟಿ ಬಸ್ ನಿಲ್ದಾಣದ ಎದುರು ನಡೆಯಲಿದೆ.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ ಹಾಗೂ ಪದ್ಮ ಮೆಡಿಕಲ್ಸ್‌ನ ಸುನೀಲ್ ಉಪಸ್ಥಿತರಿರುವರು. ಕರುಣಾ ಟ್ರಸ್ಟ್ ಅಧ್ಯಕ್ಷ ಡಾ. ಹೆಚ್.ಎನ್. ಮಲ್ಲಿಕಾರ್ಜುನ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಈ ಸಂದರ್ಭದಲ್ಲಿ ಶಿವನಕೆರೆ ಬಸವಲಿಂಗಪ್ಪ, ಬಸವರಾಜ ಒಡೆಯರ್, ಪ್ರೊ. ಎಂ. ಬಸವರಾಜ್ ಉಪಸ್ಥಿತರಿರುವರು.

## ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ

ದಾವಣಗೆರೆ, ಏ.25 - ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಕರ್ನಾಟಕ ಲೋಕಸೇವಾ ಆಯೋಗ ನಡೆಸಲಿರುವ ಕೆಎಎಸ್ ಮತ್ತು ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50 ದಿನಗಳ ತರಬೇತಿಯನ್ನು ಮೈಸೂರಿನ ಕರಾಮುವಿ ಕೇಂದ್ರ ಕಚೇರಿಯಲ್ಲಿ ನಡೆಸಲಾಗುವುದು. ಆಸಕ್ತರು ಇದೇ ದಿನಾಂಕ 30ರೊಳಗಾಗಿ ಹೆಸರು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ 0821-2515944 ಸಂಪರ್ಕಿಸಲು ಕುಲಸಚಿವ ಪ್ರೊ. ಕೆ.ಬಿ. ಪ್ರವೀಣ ತಿಳಿಸಿದ್ದಾರೆ.

## ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಪರವಾಗಿ ಹರಿಹರ ತಾ.ನಲ್ಲಿ ಇಂದು ಹೆಚ್.ಎಸ್. ನಾಗರಾಜ್ - ವಾಗೀಶ್ ಸ್ವಾಮಿ ಪ್ರಚಾರ

ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ಪರವಾಗಿ ಹರಿಹರ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಇಂದು ಕಾಂಗ್ರೆಸ್ ಪಕ್ಷದ ಮುಖಂಡರುಗಳಾದ ಹೆಚ್. ನಾಗರಾಜ್, ಶಿವಪ್ಪ, ವಾಗೀಶ್ ಸ್ವಾಮಿ, ನಂದಿಗಾವಿ ಶ್ರೀನಿವಾಸ್, ಎಸ್. ರಾಮಪ್ಪ ಅವರುಗಳು ಚುನಾವಣಾ ಪ್ರಚಾರ ಸಭೆ ನಡೆಸುವರು ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಲ್.ಬಿ. ಹನುಮಂತಪ್ಪ ಮತ್ತು ಅಬೀದ್ ಅಲಿ ತಿಳಿಸಿದ್ದಾರೆ.

ಬೆಳಿಗ್ಗೆ 8 ಗಂಟೆಗೆ ಗುತ್ತೂರು ಗ್ರಾಮದಿಂದ ಪ್ರಚಾರ ಆರಂಭಿಸುವ ಅವರುಗಳು ಗಂಗನರಸಿ, ದೀಟೂರು, ಪಾಮೇನಹಳ್ಳಿ, ಸಾರಥಿ, ಚಿಕ್ಕಬಿದರಿ, ಕರಲ್ಲಹಳ್ಳಿ, ಕುರುಬರಹಳ್ಳಿ, ಕೆಂಚನಹಳ್ಳಿ, ವಟಗನಹಳ್ಳಿ, ಬುಳ್ಳಾಪುರ, ಕೊಂಡಜ್ಜಿ, ದೊಗ್ಗಳ್ಳಿ, ಕೋಡಿಹಳ್ಳಿ, ಅಮರಾವತಿ ಗ್ರಾಮಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಪರವಾಗಿ ಪ್ರಚಾರ ನಡೆಸುವರು.

# ಬೆಂಬಲಿಗರೊಂದಿಗೆ ಕಾಂಗ್ರೆಸ್‌ಗೆ ಮರಳಿದ ಶ್ರೀಕಾಂತ್



ಮಲೇಬೆನ್ನೂರು, ಏ.25- ಜಿ.ಬೇವಿನಹಳ್ಳಿ ಗ್ರಾಮದ ಜೆಡಿಎಸ್ ಮುಖಂಡ ಎಚ್.ಬಿ. ಶ್ರೀಕಾಂತ್ ಅವರು ಕಾಂಗ್ರೆಸ್ ಪಕ್ಷ ಬೆಂಬಲಿಸಲು ತಮ್ಮ ಆಪ್ತರೊಂದಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರ ಸಮ್ಮುಖದಲ್ಲಿ ಕಾಂಗ್ರೆಸ್ಸಿಗೆ ಸೇರಿದರು.

ಹರಿಹರದ ಪಿಎಲ್‌ಡಿ ಬ್ಯಾಂಕ್ ಉಪಾಧ್ಯಕ್ಷರಾಗಿ ಮತ್ತು ಮಲೇಬೆನ್ನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಎಚ್.ಬಿ. ಶ್ರೀಕಾಂತ್, ಕಾಂಗ್ರೆಸ್‌ನಿಂದ ಜಿ.ಪಂ. ಟಿಕೆಟ್ ಸಿಗದಿದ್ದಕ್ಕೆ ಪಕ್ಷ ತೊರೆದು ಜೆಡಿಎಸ್‌ನಿಂದ ಹೊಳೆಸಿರಿಗೆರೆ ಜಿ.ಪಂ. ಕ್ಷೇತ್ರಕ್ಕೆ ಸ್ಪರ್ಧಿಸಿದ್ದರು.

ಜಿ. ಬೇವಿನಹಳ್ಳಿ ಗ್ರಾಮಕ್ಕೂ ನಮಗೂ ಅವಿನಾಭಾವ ಸಂಬಂಧವಿದೆ. ನಮ್ಮ ಜಮೀನು ಸಹ ಅಲ್ಲೇ ಇದೆ. ನಿಮ್ಮ ಸೇವೆ ನನಗೆ ನೆನಪಿದೆ. ಗ್ರಾಮದ ಎಲ್ಲಾ ಸಮಸ್ಯೆಗಳಿಗೆ ಹಂತ ಹಂತವಾಗಿ ಸ್ಪಂದಿಸುವುದಾಗಿ ಸಚಿವ ಮಲ್ಲಿಕಾರ್ಜುನ್ ಅವರು ಗ್ರಾಮಸ್ಥರಿಗೆ ಭರವಸೆ ನೀಡಿದರು.

ಶ್ರೀಕಾಂತ್ ಅವರ ಜೊತೆಯಲ್ಲಿ ಜಿ. ಬೇವಿನಹಳ್ಳಿ ಗ್ರಾಮದ ಮುದೇವಜ್ಜಿರ್ ಚಂದ್ರಪ್ಪ, ಎಚ್. ಬಂಗಾರಪ್ಪ, ಕೋಟೆ ಗೌಡ್ರ ಮಹೇಶ್ವರಪ್ಪ, ಹಿಂಡಸಘಟ್ಟೆ ಕುಬೇರಪ್ಪ, ಎಚ್.ಬಿ.ನಾಗರಾಜ್, ಕೆ.ಜಿ.ಮಹೇಶ್ವರಪ್ಪ, ಎಂ.ಮಂಜಪ್ಪ, ಗ್ರಾ ಪಂ ಸದಸ್ಯ ಕೆ ದೇವರಾಜ್, ಎಂ.ಎಸ್. ಮಹೇಶ್ವರಪ್ಪ, ಮಡಿವಾಳಪ್ಪ, ಎಚ್.ಆನಂದ್, ಎಚ್.ಬಿ. ಮಂಜುನಾಥ್, ಬಿ.ಕೆ.ನಿಂಗರಾಜ್, ಗೋಡೆಹಾಳ್ ಲೋಕಪ್ಪ, ಶಿವು ಕುಪ್ಪೇಲೂರು, ಎಂ.ನಾಗರಾಜ್, ಬನ್ನೆವ್ವರ ಚಂದ್ರಪ್ಪ, ಬನ್ನೇವ್ವರ ರಂಗಪ್ಪ, ಎಚ್. ಗಜೇಂದ್ರ, ದಾಸಪ್ಪರ ಬಸಪ್ಪ, ಎಚ್.ಎಸ್. ಹನುಮಂತಪ್ಪ, ಹನುಮಂತಪ್ಪ, ಮಡಿವಾಳರ ರಾಜಪ್ಪ, ಮಾದಣ್ಣರ ಹನುಮಂತಪ್ಪ, ದಾಸಪ್ಪರ ನಿಂಗಪ್ಪ, ಬಿ.ಕೆ.ತಿಮ್ಮಗೌಡ, ಪಿ.ವಿಜಯಕುಮಾರ್, ಜಿ.ಎಸ್.ಜಯ್ಯಪ್ಪ ಸೇರಿದಂತೆ ಪಂಪಜ್ಜರ ರಾಜಪ್ಪ ಜೆಡಿಎಸ್ ಮತ್ತು ಬಿಜೆಪಿ ತೊರೆದು ಕಾಂಗ್ರೆಸ್‌ಗೆ ಸೇರ್ಪಡೆಯಾದರು.

ಈ ವೇಳೆ ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಜಿ.ಪಂ. ಮಾಜಿ ಸದಸ್ಯರಾದ ಬಿ. ಎಂ.ವಾಗೀಶ್ ಸ್ವಾಮಿ, ತ್ಯಾವಣಿಗಿ ಗೋವಿಂದಸ್ವಾಮಿ, ತಾ.ಪಂ. ಮಾಜಿ ಅಧ್ಯಕ್ಷ ಬಿಳಸನೂರು ತಿಪ್ಪಾರುದ್ರರೆಡ್ಡಿ, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಮುಖಂಡರಾದ ದೇವರಬೆಳಕೆರೆ ರುದ್ರಪ್ಪ, ಕುಕ್ಕವಾಡ ಮಂಜಣ್ಣ, ತಿಮ್ಮೇನಹಳ್ಳಿ ರಾಜಣ್ಣ, ಗೋಣಿವಾಡದ ಮುರುಗೇಂದ್ರಪ್ಪ, ಹುಲ್ಲುಮನಿ ಗಣೇಶ್, ಬೆಳ್ಳೂಡಿ ಬಸವರಾಜ್, ಜಿಗಳಿಯ ಬಿ. ಎಂ.ದೇವೇಂದ್ರಪ್ಪ, ಜಿ ಬೇವಿನಹಳ್ಳಿಯ ಮುಖಂಡ ಬಿ.ಕೆ ಗದಿಗೆಪ್ಪ, ಜಿಗಳಿ ಗ್ರಾ.ಪಂ ಉಪಾಧ್ಯಕ್ಷ ಹೋಬಳಿ ಆನಂದಗೌಡ, ಕುಂಬಳೂರು ವಾಸು, ಮಲೇಬೆನ್ನೂರಿನ ಪಿ.ಆರ್.ಕುಮಾರ್, ಪಿ.ಎಚ್. ಶಿವಕುಮಾರ್ ಮತ್ತಿತರರಿದ್ದರು.

## ಹೆಚ್. ಹಾಲಮ್ಮ ನಿಧನ



ಚನ್ನಗಿರಿ ತಾಲ್ಲೂಕು ನಲ್ಕುದುರೆ ಗ್ರಾಮದ ನಿವಾಸಿ
ದಿ. ಹಂಚಿನಮನೆ ಗೌಡ್ರು ಹೆಚ್.ವಿ. ಸಿದ್ದಪ್ಪ, ಮುಖ್ಯ ಶಿಕ್ಷಕರು ಇವರ ಧರ್ಮಪತ್ನಿ

**ಶ್ರೀಮತಿ ಹೆಚ್. ಹಾಲಮ್ಮ**

ಇವರು ದಿನಾಂಕ 25.04.2024ರ ಗುರುವಾರ ಬೆಳಿಗ್ಗೆ 6.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 81 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು 25.04.2024ರ ಗುರುವಾರ ಸಂಜೆ 4 ಗಂಟೆಗೆ ನೆರವೇರಿಸಲಾಯಿತು.

**ದುಃಖತಪ್ತ ಕುಟುಂಬ ವರ್ಗ, ಮೊ : 84960 53737**

## ಹತ್ತನೇ ವರ್ಷದ ಪುಣ್ಯಸ್ಮರಣೆ



**ದಿ|| ಬಿ.ಹೆಚ್. ವೆಂಕಟೇಶ್‌ರೆಡ್ಡಿ**

ಪ್ರೊ|| ಶ್ರೀ ಆಂಜನೇಯ ಏಜೆನ್ಸೀಸ್ (IOCL)
ಬಿದರಕೆರೆ, ಜಗಳೂರು ತಾಲ್ಲೂಕು.

**ಸದಾ ನಿಮ್ಮ ನೆನಪಿನಲ್ಲಿರುವ**

ಬಿ.ಹೆಚ್. ನಾಗರೆಡ್ಡಿ ಮತ್ತು ಸಹೋದರರು,
ಕುಟುಂಬ ವರ್ಗ, ಸ್ನೇಹಿತರು ಮತ್ತು ಬಂಧುಗಳು.

ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

1974 2023

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಶುಕ್ರವಾರ, ಏಪ್ರಿಲ್ 26, 2024

☎ 08192 254736 91642 99999

## ಕಾಂಗ್ರೆಸ್‌ಗೆ ಮತ ನೀಡಿದರೆ ನಷ್ಟ, ಬಿಜೆಪಿಗೆ ಕೊಟ್ಟರೆ ಲಾಭ

### ಹರಿಹರದ ರೋಡ್ ಶೋನಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ



ಹರಿಹರ, ಏ.25- ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ, ದೇಶದಲ್ಲಿ ಕಾಂಗ್ರೆಸ್ ಪಕ್ಷವು ಕೇವಲ 45 ಸ್ಥಾನ ಗಳಿಸುವುದರಿಂದ ದಾವಣಗೆರೆ ಕಾಂಗ್ರೆಸ್ ಅಭ್ಯರ್ಥಿಯನ್ನು ಸಂಸದರನ್ನಾಗಿ ಆಯ್ಕೆ ಮಾಡಿದರೆ ಕೊನೆಯ ಭಾಗದಲ್ಲಿ ಕುಳಿತುಕೊಂಡು ಧ್ವನಿ ಎತ್ತಲು ಆಗದಂತಹ ಪರಿಸ್ಥಿತಿ ಬರುವುದಲ್ಲದೇ, ಅಭಿವೃದ್ಧಿ ಕಾರ್ಯಗಳಿಗೆ ಹಿನ್ನಡೆಯಾಗಲಿದೆ. ಕಾರಣ, ಬಿಜೆಪಿ ಅಭ್ಯರ್ಥಿ ಗಾಯತ್ರಿ ಜಿ.ಎಂ.ಸಿದ್ದೇಶ್ವರ ಅವರನ್ನು ಹೆಚ್ಚು ಮತಗಳ ಅಂತರದಿಂದ ಗೆದ್ದರೆ ದಾವಣಗೆರೆ ಸರ್ವಾಂಗೀಣ ಅಭಿವೃದ್ಧಿಯಾಗುತ್ತದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ನಗರದಲ್ಲಿ ಎನ್.ಡಿ.ಎ ಅಭ್ಯರ್ಥಿ ಗಾಯತ್ರಿ ಜಿ.ಎಂ. ಸಿದ್ದೇಶ್ವರ ಅವರ ಪರವಾಗಿ ಇಂದು ನಡೆದ ಬೃಹತ್ ರೋಡ್ ಶೋ ಮೂಲಕ ಮತಯಾಚನೆ ಮಾಡಿ, ನಂತರ ಅವರು ಮಾತನಾಡಿದರು.

ಲೋಕಸಭಾ ಚುನಾವಣೆ ಜಿ.ಪಂ, ತಾ.ಪಂ ಚುನಾವಣೆ ಎಂಬ ರೀತಿಯ ಚುನಾವಣೆ ಎಂದು ಭಾವಿಸಿಕೊಳ್ಳದೇ, ದೇಶವನ್ನು ಸುಭದ್ರವಾಗಿ ಕಟ್ಟುವ ಹಾಗೂ ದೇಶದ ಭವಿಷ್ಯ ರೂಪಿಸುವ ಮತ್ತು ಸರ್ವಾಂಗೀಣ ಅಭಿವೃದ್ಧಿಗೆ, ಸುರಕ್ಷತೆ ಯ ದೃಷ್ಟಿಯಿಂದ ನಡೆಯುವಂತಹ ಚುನಾವಣೆಯಾಗಿದೆ ಎಂದು ಭಾವಿಸಿ ಕೊಂಡು, ನರೇಂದ್ರ ಮೋದಿಯವ ರನ್ನು ಮತ್ತೊಮ್ಮೆ ಪ್ರಧಾನಿಯನ್ನಾಗಿ ಮಾಡುವ ದೃಷ್ಟಿಯಿಂದ ದಾವಣಗೆರೆಯಲ್ಲಿ ಬಿಜೆಪಿಯನ್ನು ಗೆಲ್ಲಿಸಬೇಕು ಎಂದು ಕರೆ ನೀಡಿದರು.

ರಾಜ್ಯದಲ್ಲಿ ಜೆಡಿಸ್ ಮತ್ತು ಬಿಜೆಪಿ ಒಟ್ಟಾಗಿದ್ದರಿಂದ ಕಾಂಗ್ರೆಸ್ ಪಕ್ಷವು ಆತಂಕಕ್ಕೆ (4ನೇ ಪುಟಕ್ಕೆ)

**ಸಚಿವರಿಗೆ ಸವಾಲ್**

**ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇದ್ದಾಗ ದಾವಣಗೆರೆ ಕ್ಷೇತ್ರಕ್ಕೆ ಹಲವಾರು ಕೋಟಿ ರೂ. ಅನುದಾನ ತಂದು ಅಭಿವೃದ್ಧಿ ಮಾಡಲಾಗಿದೆ. ಆದರೆ, ದಾವಣಗೆರೆ ಜಿಲ್ಲೆಯ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ತಮ್ಮ ಕಾಂಗ್ರೆಸ್ ಪಕ್ಷದ ಇನ್ನೂ ಮೂರು ವರ್ಷದ ಆಡಳಿತ ಅವಧಿಯಲ್ಲಿ, ಅದರ ಶೇ.50 ರಷ್ಟು ಅನುದಾನವನ್ನು ತಂದು ದಾವಣಗೆರೆ ಕ್ಷೇತ್ರವನ್ನು ಅಭಿವೃದ್ಧಿ ಮಾಡಿ ತೋರಿಸಲಿ.**

**- ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ**

## ಜನಾದೇಶಕ್ಕೆ ಮೊದಲ ಹೆಜ್ಜೆ ಇಟ್ಟ ಮತದಾರ

### ಹಿರಿಯರು, ವಿಶೇಷ ಚೇತನರಿಂದ ಮನೆಯಿಂದಲೇ ಮತದಾನ ಶುರು





ದಾವಣಗೆರೆ, ಏ.24 - ದಾವಣಗೆರೆ ಲೋಕಸಭಾ ಕ್ಷೇತ್ರದ ಚುನಾವಣೆಗೆ ಮತದಾನದ ಮೊದಲ ಹಂತ ಆರಂಭವಾಗಿದೆ. ಮನೆಯಿಂದಲೇ ಮತದಾನ ಮಾಡಲು ಅವಕಾಶ ಪಡೆದಿರುವವರು ತಮ್ಮ ಹಕ್ಕು ಚಲಾಯಿಸಿದ್ದಾರೆ.

ದಾವಣಗೆರೆ ಲೋಕಸಭಾ ಕ್ಷೇತ್ರದ 8 ವಿಧಾನಸಭಾ ಕ್ಷೇತ್ರಗಳು 85 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಮತ್ತು ವಿಶೇಷ ಚೇತನರ ಪೈಕಿ 2,262 ಜನರು ಮನೆಯಿಂದಲೇ ಮತದಾನ ಮಾಡುವ ಆಯ್ಕೆ ಬಯಸಿದ್ದಾರೆ.

ದಾವಣಗೆರೆ ಕ್ಷೇತ್ರದಲ್ಲಿ ವಿಶೇಷಚೇತನರು 804 ಹಾಗೂ ಹಿರಿಯ ನಾಗರಿಕರಾದ 85 ವರ್ಷ ಮೇಲ್ಪಟ್ಟವರು 1,458 ಮತದಾರರು ನೋಂದಾಯಿಸಿದ್ದಾರೆ. ಗುರುವಾರದಿಂದ ಇವರು ಮತದಾನ ಆರಂಭಿಸಿದ್ದು, ಏ. 27ರವರೆಗೆ ಈ ಪ್ರಕ್ರಿಯೆ ನಡೆಯಲಿದೆ.

ದಾವಣಗೆರೆ ಉತ್ತರ ಕ್ಷೇತ್ರದ ಮತಗಟ್ಟೆ 71 ರಲ್ಲಿ ಬರುವ 90 ವರ್ಷದ ಎನ್.ಸುಮತಿ ಭಟ್ ಅವರು ಮನೆಯಿಂದಲೇ ಮತದಾನ ಮಾಡಿದರು. ಮತಗಟ್ಟೆ 75 ರಲ್ಲಿನ ವಿಶೇಷ ಚೇತನರಾದ ಹೆಚ್. ವಿನೋದಬಾಯಿ ಇವರು ಮನೆಯಲ್ಲಿಯೇ ಮತದಾನ ಮಾಡಿದರು.

ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ಅವರು ಮನೆಯಿಂದಲೇ ಮತದಾನ ಮಾಡುವ ಪ್ರಕ್ರಿಯೆ ವೀಕ್ಷಿಸಿದರು. ಮನೆಯಲ್ಲಿ ಮತದಾನ ಮಾಡುವಾಗ ಮತದ ಗೌಪ್ಯತೆ ಮತ್ತು ಮಹತ್ವ ಕಾಪಾಡಿಕೊಳ್ಳಬೇಕು ಎಂದು ಸಿಬ್ಬಂದಿಗೆ ತಿಳಿಸಿದರು.

ಮನೆಯಿಂದಲೇ ಮತದಾನ ಮಾಡಿದ ನಂತರ ಜಿಲ್ಲಾಧಿಕಾರಿ ವೆಂಕಟೇಶ್ ಜೊತೆ ಮಾತನಾಡಿದ ಸುಮತಿ ಭಟ್, ಈವರೆಗೂ ಯಾವುದೇ ಚುನಾವಣೆಯಲ್ಲಿ ಮತ ಹಾಕುವುದನ್ನು ಬಿಟ್ಟಿಲ್ಲ. ಚುನಾವಣಾ ಆಯೋಗ ನನ್ನಂತಹ ಅನೇಕರಿಗೆ ಮನೆಯಲ್ಲಿ (4ನೇ ಪುಟಕ್ಕೆ)

### ಮನೆಗೇ ಬರುವ ಮತಗಟ್ಟೆ

**ಮನೆಯಲ್ಲಿ ಮತದಾನ ಮಾಡುವ ಪ್ರಕ್ರಿಯೆ ಒಂದು ರೀತಿ ಮನೆ ಬಾಗಿಲಿಗೇ ಮತಗಟ್ಟೆ ಬಂದ ರೀತಿಯಲ್ಲಿದೆ. ಮನೆಯಿಂದಲೇ ಮತದಾನ ಮಾಡುವಾಗ ಮತ ಪತ್ರ ಬಳಸಲಾಗುತ್ತದೆ.**

**ಪ್ರತಿ ಮತದಾರರ ಮನೆಗೆ ಪಿಆರ್‌ಓ, ಸೆಕ್ಟರ್ ಅಧಿಕಾರಿ, ಮೈಕ್ರೋ ಅಬ್ಸರ್‌ವರ್, ಮತದಾನ ಅಧಿಕಾರಿ, ಬಿಎಲ್‌ಓ, ವೀಡಿಯೋಗ್ರಾಫರ್, ಪೊಲೀಸ್ ಸಿಬ್ಬಂದಿಗಳ ತಂಡ ತೆರಳುತ್ತದೆ. ಚುನಾವಣಾ ಆಯೋಗದ ಪ್ರಕಟಣೆಯನ್ನು ಓದುವ ಮೂಲಕ ಮತದಾರರಿಗೆ ತಿಳಿಸಿ, ಮನೆಯಲ್ಲಿಯೇ ಮತದಾನ ಮಾಡಲು ಮತದಾರರ ವಹಿ ಹಾಗೂ ನಮೂನೆ-13 ಕ್ಕೆ ಸಹಿ ಪಡೆಯಲಾಗುತ್ತದೆ. ಮತ ಪತ್ರದಲ್ಲಿರುವಂತೆ ಅಭ್ಯರ್ಥಿಗಳ ವಿವರ ಹಾಗೂ ಮತ ಚಲಾಯಿಸುವ ವಿಧಾನದ ಬಗ್ಗೆ ತಿಳಿಸಲಾಗುತ್ತದೆ. ನಂತರ ಮತದಾನದ ಗೌಪ್ಯತೆ ಕಾಯ್ದುಕೊಂಡು ಮತ ಚಲಾವಣೆಗೆ ಅವಕಾಶ ನೀಡಲಾಗುತ್ತದೆ.**

## ಬಡವರ ಜೀವನಕ್ಕೆ ಗೃಹಲಕ್ಷ್ಮಿ ಸಹಕಾರಿ

### ಜಗಳೂರು ಕ್ಷೇತ್ರದಲ್ಲಿ ಮತ ಯಾಚಿಸಿದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್



ಜಗಳೂರು, ಏ.25- ಬಡತನ ಜೀವನಾಧಾರಕ್ಕೆ ರಾಜ್ಯ ಕಾಂಗ್ರೆಸ್ ಸರ್ಕಾರದ ಗೃಹಲಕ್ಷ್ಮಿ ಯೋಜನೆ ಸಹಕಾರಿಯಾಗಿದ್ದು, ಈ ಯೋಜನೆಯಿಂದ ಲಕ್ಷಾಂತರ ಕುಟುಂಬಗಳಿಗೆ ಅನುಕೂಲವಾಗಿದೆ ಎಂದು ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ॥ ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದರು.

ಗುರುವಾರ ಜಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಜಗಳೂರು ತಾಲ್ಲೂಕಿನ ಅಣಬೂರು ಗ್ರಾಮದಿಂದ ಇಂದು ಪ್ರಚಾರ ಕಾರ್ಯ ಆರಂಭಿಸಿದ ಪ್ರಭಾ ಮಲ್ಲಿಕಾರ್ಜುನ್ ಅವರು ಹನುಮಂತಾಪುರ, ತರಳಬಾಳು ಕೇಂದ್ರ, ಹಿರೇಮಲ್ಲನಹೊಳೆ, ಮುಸ್ಟೂರು, ಕಲ್ಲೇದೇವರಪುರ, ದೊಣ್ಣೆಹಳ್ಳಿ, ತೋರಣಗಟ್ಟೆ, ಬಿದರಕೆರೆ, ಬಿಸ್ತುವಳ್ಳಿ ಗ್ರಾಮಗಳಲ್ಲಿ ಪ್ರಚಾರ ನಡೆಸಿ ಮತದಾರರನ್ನುದ್ದೇಶಿಸಿ ಮಾತನಾಡಿದರು.

ಇತ್ತೀಚೆಗೆ ಯುಗಾದಿ ಹಬ್ಬಕ್ಕೆ ಮನೆಗಳಿಗೆ ಹೊಸ ವಸ್ತುಗಳನ್ನು ಖರೀದಿಸುವುದು ವಾಡಿಕೆ. ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಗೃಹಲಕ್ಷ್ಮಿ ಯೋಜನೆಯನ್ನು ಜಾರಿಗೆ ತಂದಿದ್ದರಿಂದ ಸಾವಿರಾರು ಹೆಣ್ಣು ಮಕ್ಕಳು ತಮ್ಮ ಮನೆಗಳಿಗೆ ಟಿ.ವಿ., ಫ್ರಿಜ್, ವಾಷಿಂಗ್ ಮೆಷಿನ್, ಬಂಗಾರ ಖರೀದಿಸಿದ್ದಾರೆ. ಇತ್ತೀಚೆಗೆ ಪಿ.ಯು.ಸಿ ಪರೀಕ್ಷೆ ಫಲಿತಾಂಶದಲ್ಲಿ ಕರ್ನಾಟಕಕ್ಕೆ ನಂಬರ್ 1 ಸ್ಥಾನ ಪಡೆದ ವಿದ್ಯಾರ್ಥಿಯೂ ಸಹ ನನ್ನ ವಿದ್ಯಾಭ್ಯಾಸಕ್ಕೆ ಗೃಹಲಕ್ಷ್ಮೀ ಯೋಜನೆ ಸಹಕಾರಿಯಾಗಿದೆ ಎಂದು ಹೇಳಿರುವುದನ್ನು ಸ್ಮರಿಸಿದರು.

ಕಾಂಗ್ರೆಸ್ ಪಕ್ಷ ಇಂತಹ ಹತ್ತು ಹಲವು ಕಾರ್ಯಕ್ರಮಗಳನ್ನು ರೂಪಿಸಿದ ಕೀರ್ತಿಗೆ ಭಾಜನವಾಗಿದ್ದು, ಜಗಳೂರು ವಿಧಾನಸಭಾ ಕ್ಷೇತ್ರವೊಂದಕ್ಕೆ ಮಾರ್ಚ್ ಅಂತ್ಯಕ್ಕೆ ಸುಮಾರು ರೂ.98 ಕೋಟಿಯಷ್ಟು (4ನೇ ಪುಟಕ್ಕೆ)

## ಮುಸ್ಲಿಂ ಸಮುದಾಯಕ್ಕೆ ಸಗಟು ಮೀಸಲಾತಿ

ನವದೆಹಲಿ, ಏ. 25 - ಕರ್ನಾಟಕದಲ್ಲಿ ಮುಸ್ಲಿಂ ಸಮುದಾಯಕ್ಕೆ ಸಾರಾ ಸಗಟು ಮೀಸಲಾತಿ ನೀಡಿದ ಬಗ್ಗೆ ಕರ್ನಾಟಕದ ಮುಖ್ಯ ಕಾರ್ಯದರ್ಶಿಯವರನ್ನು ಕರೆಸಿ ವಿವರಣೆ ಪಡೆಯಲಾಗುವುದು ಎಂದು ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗದ (ಎನ್.ಸಿ.ಬಿ.ಸಿ.) ಅಧ್ಯಕ್ಷ ಹಂಸರಾಜ್ ಆಹಿರ್ ತಿಳಿಸಿದ್ದಾರೆ.

ಇಡೀ ಮುಸ್ಲಿಂ ಸಮುದಾಯವನ್ನು ಹಿಂದುಳಿದ ಜಾತಿ ಎಂದು ಪರಿಗಣಿಸಿ, ಮೀಸಲಾತಿ ನೀಡಲು ಕರ್ನಾಟಕ ಸರ್ಕಾರ ನಿರ್ಧರಿಸಿದ್ದನ್ನು ಕೇಂದ್ರ ಆಯೋಗ ತರಾಟೆಗೆ ತೆಗೆದುಕೊಂಡಿತ್ತು. ಈ ರೀತಿಯ ಸಾರಾಸಗಟು ಮೀಸಲಾತಿ ಸಾಮಾಜಿಕ ನ್ಯಾಯದ ತತ್ವಗಳ ಉಲ್ಲಂಘನೆ ಎಂದು ಹೇಳಿತ್ತು.

ಕರ್ನಾಟಕದ ಮುಸ್ಲಿಂ ಧರ್ಮದ ಎಲ್ಲ ಜಾತಿ ಹಾಗೂ ಸಮುದಾಯಗಳನ್ನು ಸಾಮಾಜಿಕವಾಗಿ - ಆರ್ಥಿಕವಾಗಿ ಹಿಂದುಳಿದವರು ಎಂದು ಪರಿಗಣಿಸಲಾಗಿದೆ. ಇವರೆಲ್ಲರನ್ನೂ ರಾಜ್ಯದ 2ಬಿ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಲಾಗಿದೆ ಎಂದು ಎನ್.ಸಿ.ಬಿ.ಸಿ. ಅಧ್ಯಕ್ಷ ಆಹಿರ್ ಹೇಳಿದ್ದಾರೆ.

ಈ ವರ್ಗೀಕರಣದ ಕಾರಣದಿಂದಾಗಿ ಅವರು ಶಿಕ್ಷಣ ಸಂಸ್ಥೆಗಳಲ್ಲಿ ಹಾಗೂ ಉದ್ಯೋಗದಲ್ಲಿ ಮೀಸಲಾತಿ ಪಡೆಯಲು (4ನೇ ಪುಟಕ್ಕೆ)

**ಮುಖ್ಯ ಕಾರ್ಯದರ್ಶಿಯಿಂದ ವಿವರಣೆ ಪಡೆಯಲಿರುವ ಹಿಂದುಳಿದ ವರ್ಗಗಳ ಆಯೋಗ**





## ಬಿಜೆಪಿ ಅಭ್ಯರ್ಥಿಗೆ ಬೆಂಬಲ ಸೂಚಿಸಿದ ಡಾ. ವೈ.ರಾಮಪ್ಪ



ದಾವಣಗೆರೆ, ಏ.25- ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರಿಗೆ ಬೆಂಬಲ ಸೂಚಿಸಿರುವುದಾಗಿ ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷ ಡಾ.ವೈ. ರಾಮಪ್ಪ ಹೇಳಿದ್ದಾರೆ.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತಾನು ಹಲವು ವರ್ಷಗಳಿಂದ ಕಾಂಗ್ರೆಸ್ ಪಕ್ಷದ ಸಕ್ರಿಯ ಕಾರ್ಯಕರ್ತನಾಗಿ ಸೇವೆ ಸಲ್ಲಿಸಿಕೊಂಡು ಬಂದಿದ್ದೇನೆ. ಆದರೆ, ಇತ್ತೀಚಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷ ಕೆಲವರ ಕೈಯಲ್ಲಿ ಮಾತ್ರವೇ ಸಿಲುಕಿರುವ ಕಾರಣ ಆಂತರಿಕ ಪ್ರಜಾಪ್ರಭುತ್ವಕ್ಕೆ ಗೌರವ ಇಲ್ಲವಾಗಿದೆ. ಆದ್ದರಿಂದ ಮನನೊಂದು ಕಾಂಗ್ರೆಸ್ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದೇನೆ ಎಂದು ತಿಳಿಸಿದರು. ಈ ಮಧ್ಯೆ ಭೋವಿ ಮತ್ತು ಇತರೆ (4ನೇ ಪುಟಕ್ಕೆ)

## 28-29ರಂದು ಮೋದಿ ರಾಜ್ಯ ಪ್ರವಾಸ



ಬೆಂಗಳೂರು, ಏ. 25 - ಪ್ರಧಾನಿ ನರೇಂದ್ರ ಮೋದಿ ಅವರು ಏಪ್ರಿಲ್ 28 ಮತ್ತು 29 ರಂದು ರಾಜ್ಯದಲ್ಲಿ ಪಕ್ಷದ ಅಭ್ಯರ್ಥಿಗಳ ಪರ ಚುನಾವಣಾ ಪ್ರಚಾರ ಕೈಗೊಳ್ಳಲಿದ್ದಾರೆ.

ಮೊದಲ ಹಂತದ 14 ಕ್ಷೇತ್ರಗಳ ವ್ಯಾಪ್ತಿಯಲ್ಲಿ ಎರಡು ದಿನ ಚುನಾವಣಾ ಪ್ರಚಾರ ಕೈಗೊಂಡ ಮೋದಿ, ಎರಡನೇ ಹಂತದಲ್ಲಿ ಸತತವಾಗಿ ಆರು ಬೃಹತ್ ಸಮಾವೇಶಗಳನ್ನು ಉದ್ದೇಶಿಸಿ ಮತ ಯಾಚಿಸಲಿದ್ದಾರೆ.

ಲೋಕಸಭಾ ಚುನಾವಣಾ ಅಧಿಸೂಚನೆ ಹೊರಬೀಳುವುದಕ್ಕೂ ಮುನ್ನವೇ ಪ್ರಧಾನಿ ಅವರು ಶಿವಮೊಗ್ಗದಲ್ಲಿ ಬೃಹತ್ ಸಮಾವೇಶ ಉದ್ದೇಶಿಸಿ ಮಾತನಾಡಿದ್ದರು. ಏಪ್ರಿಲ್ 28 ರಂದು ಬೆಳಗ್ಗೆ 10 ಗಂಟೆಗೆ ಬೆಳಗಾವಿ, ಮಧ್ಯಾಹ್ನ 12 ಗಂಟೆಗೆ ಶಿರಸಿ, 1 ಗಂಟೆಗೆ ದಾವಣಗೆರೆ, ಸಂಜೆ 4 ಗಂಟೆಗೆ ಬಳ್ಳಾರಿಯಲ್ಲಿ, ಮರು ದಿನ ಬೆಳಗ್ಗೆ 11 ಗಂಟೆಗೆ ಬಾಗಲಕೋಟೆಯಲ್ಲಿ ಚುನಾವಣಾ ಪ್ರಚಾರ ನಡೆಸಲಿದ್ದಾರೆ. ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್, ಮಾಜಿ ಉಪಮುಖ್ಯಮಂತ್ರಿ ಶ್ರೀರಾಮುಲು, ಮಾಜಿ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಸಂಸದ ಪಿ.ಸಿ. (4ನೇ ಪುಟಕ್ಕೆ)

## ಮೋದಿಜೀ ಅಂತಹ ನಾಯಕ ಮತ್ತೆ ಸಿಗೋಲ್ಲ

### ಹೊನ್ನಾಳಿ ತಾಲ್ಲೂಕಿನಲ್ಲಿ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಮತಯಾಚನೆ



ಹೊನ್ನಾಳಿ, ಏ.25- ರಾಜಕೀಯ, ಶೈಕ್ಷಣಿಕ, ಆಧ್ಯಾತ್ಮಿಕ, ಧಾರ್ಮಿಕವಾಗಿ ಎಲ್ಲ ದೃಷ್ಟಿಯಿಂದಲೂ ಪರಿಪೂರ್ಣತೆ ಹೊಂದಿರುವ ನರೇಂದ್ರ ಮೋದಿ ಅಂತಹ ಇನ್ನೊಬ್ಬ ನಾಯಕ 100 ವರ್ಷ ಕಳೆದರೂ ಈ ದೇಶಕ್ಕೆ ಸಿಗುವುದಿಲ್ಲ ಎಂದು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ್ ಅಭಿಪ್ರಾಯಪಟ್ಟರು.

ಹೊನ್ನಾಳಿ ವಿಧಾನಸಭಾ ಕ್ಷೇತ್ರದ ಅರಕೆರೆ, ಹಿರೇಗೋಣಿಗೆರೆ, ಬೇಲಿಮಲ್ಲೂರು ಗ್ರಾಮಗಳಲ್ಲಿ ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ನೇತೃತ್ವದಲ್ಲಿ ಮತಯಾಚಿಸಿ ಅವರು ಮಾತನಾಡಿದರು.

ಮೋದಿ ಅಂತಹ ನಾಯಕ ಬೇರೆ ದೇಶದಲ್ಲಿ ಜನಿಸಿದ್ದರೆ, ದೇಶದ ಜನರೆಲ್ಲರೂ ಅವರನ್ನು ಪೂಜಿಸುತ್ತಿದ್ದರು. ಇಂತಹ ಮೇರು ವ್ಯಕ್ತಿತ್ವದ ಮೋದಿ ಜೀ ಅವರನ್ನು ವಿರೋಧಿಸುವಂತಹ ಮಾನಸಿಕ ಸ್ಥಿತಿ ಕೆಲವರಲ್ಲಿದೆ. ಇಂತಹ ಮನಸ್ಥಿತಿ ಇರುವ ಕಾಂಗ್ರೆಸ್ ಪಕ್ಷದಿಂದ ದೇಶಕ್ಕೆ ಯಾವ ಲಾಭವಿದೆ ? ಎಂದು ಪ್ರಶ್ನಿಸಿದರು.

ಮೋದಿ ಕೇವಲ ವ್ಯಕ್ತಿಯಲ್ಲ. ಅವರೊಂದು ಶಕ್ತಿ. 23 ವರ್ಷಗಳ ಕಾಲ ಗುಜರಾತ್ ಮುಖ್ಯಮಂತ್ರಿಯಾಗಿ, ದೇಶದ ಪ್ರಧಾನಿಯಾಗಿ ಅವರ ರಾಜಕೀಯ ಜೀವನದಲ್ಲಿ ಒಂದು ದಿನವೂ ರಜೆ ತೆಗೆದುಕೊಳ್ಳದೆ 16 ರಿಂದ 18 ತಾಸು ಈ ದೇಶದ ಸರ್ವರ ಒಳಿತಿಗಾಗಿ ಕೆಲಸ ಮಾಡುತ್ತಿದ್ದಾರೆ. ಅಂತಹ ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಿ ಮಾಡುವ ಜವಾಬ್ದಾರಿ ನಮ್ಮ ಮೇಲಿದೆ. ನೀವು ಕಮಲದ ಗುರುತಿಗೆ ಮತ ಹಾಕಿ, ನನ್ನು ಇಲ್ಲಿ ಗೆಲ್ಲಿಸಿದರೆ ಅಲ್ಲಿ ಮೋದಿ ಅವರು ಗೆದ್ದು ಪ್ರಧಾನಿ ಆಗುತ್ತಾರೆ. ಇಂತಹ ಅವಕಾಶವನ್ನು ನೀವ್ಯಾರೂ ಬಿಡಬಾರದು (4ನೇ ಪುಟಕ್ಕೆ)

# ರಾಜ್ಯದಲ್ಲಿ ಇಂದು ಮೊದಲ ಹಂತದ ಚುನಾವಣೆ



**14 ಕ್ಷೇತ್ರಗಳ 274 ಅಭ್ಯರ್ಥಿಗಳ ಹಣೆಬರಹ ನಿರ್ಧಾರ**

ಬೆಂಗಳೂರು, ಏ. 25 - ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಯುವರಾಜ ಯದುವೀರ ಕೃಷ್ಣದತ್ತ ಒಡೆಯರ್, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಂಸದ ಡಿ.ಕೆ.ಸುರೇಶ್ ಸೇರಿದಂತೆ 274 ಅಭ್ಯರ್ಥಿಗಳ ರಾಜಕೀಯ ಭವಿಷ್ಯವನ್ನು ಮತದಾರರು ಶುಕ್ರವಾರ ಬರೆಯಲಿದ್ದಾರೆ.

ಹಳೆ ಮೈಸೂರು ಭಾಗದ 14 ಲೋಕಸಭಾ ಕ್ಷೇತ್ರಗಳಿಗೆ ನಾಳೆ ಬೆಳಗ್ಗೆ 7 ಗಂಟೆಯಿಂದ ಸಂಜೆ 6 ಗಂಟೆಯವರೆಗೂ ಮತದಾನಕ್ಕೆ ಅವಕಾಶವಿದೆ.

ಮುಕ್ತ ಹಾಗೂ ಶಾಂತಿಯುತ ಮತದಾನಕ್ಕೆ ಚುನಾವಣಾ ಆಯೋಗ ಸಕಲ ಸಿದ್ಧತೆ ಮಾಡಿಕೊಂಡಿರುವುದಲ್ಲದೆ, ಈಗಾಗಲೇ ಮತಗಟ್ಟೆಗಳಲ್ಲಿ ಅಧಿಕಾರಿಗಳು ಬೀಡುಬಿಟ್ಟಿದ್ದಾರೆ.

ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆಯಾಗಿ ಅರೆಸೇನಾ ಪಡೆ, ನೆರೆ ರಾಜ್ಯ ಪೊಲೀಸರ ಜೊತೆಗೆ ನಮ್ಮ ಪೊಲೀಸರು ಹಾಗೂ ಹೋಂಗಾರ್ಡ್ ಸಿಬ್ಬಂದಿಯನ್ನು ಬಳಕೆ ಮಾಡಿಕೊಳ್ಳುತ್ತಿದೆ.

ಆಡಳಿತಾರೂಢ ಕಾಂಗ್ರೆಸ್ ಹಾಗೂ ಎನ್‌ಡಿಎ ಮೈತ್ರಿಕೂಟದ ಬಿಜೆಪಿ-ಜೆಡಿಎಸ್ 14 ಕ್ಷೇತ್ರಗಳಲ್ಲೂ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಿ ಚುನಾವಣೆಯನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ.ದೇವೇಗೌಡ ಪ್ರತಿನಿಧಿಸುವ ಕ್ಷೇತ್ರಗಳಿಗೂ ಚುನಾವಣೆ ನಡೆಯುತ್ತಿದೆ.

ಸಿದ್ದರಾಮಯ್ಯ ಪ್ರತಿನಿಧಿಸುವ ಮೈಸೂರು-ಕೊಡಗು, ಶಿವಕುಮಾರ್ ಪ್ರತಿನಿಧಿಸುವ ಬೆಂಗಳೂರು ಗ್ರಾಮಾಂತರ ಕ್ಷೇತ್ರವನ್ನು ಬಿಜೆಪಿ ವರಿಷ್ಠರು ಪ್ರತಿಷ್ಠೆಯಾಗಿ ತೆಗೆದುಕೊಂಡು ಎರಡೂ ಕ್ಷೇತ್ರಗಳನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳಲು ಹೊಸ ಮುಖಗಳಿಗೆ ಅವಕಾಶ ಮಾಡಿಕೊಟ್ಟಿದೆ.

ಮೈಸೂರು-ಕೊಡಗಿನಲ್ಲಿ ಹಾಲಿ ಸಂಸದ ಪ್ರತಾಪ್ ಸಿಂಹ ಅವರ ಬದಲು ರಾಜಮನೆತನದ ಯುವರಾಜನಿಗೆ ಟಿಕೆಟ್ ನೀಡಿದ್ದರೆ, ಬೆಂಗಳೂರು ಗ್ರಾಮಾಂತರದಲ್ಲಿ ಹೃದಯ ತಜ್ಞ ಡಾ. ಮಂಜುನಾಥ್ ಅವರನ್ನು ಕಣಕ್ಕಿಳಿಸಿದೆ.

ಈ ಎರಡೂ ಕ್ಷೇತ್ರಗಳು ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅವರುಗಳಿಗೆ ಪ್ರತಿಷ್ಠೆಯಾಗಿವೆ. ಅವರ ಪ್ರತಿಷ್ಠೆಯನ್ನು ಬಿಜೆಪಿಯೂ ತೆಗೆದುಕೊಂಡಿದೆ. ಹೀಗಾಗಿ ರಾಜಕೀಯ ಗಂಧ-ಗಾಳಿ ಅರಿಯದ ಸಮಾಜ ಸೇವೆಯಲ್ಲಿರುವವರನ್ನು ಕರೆತಂದು ಕಣಕ್ಕಿಳಿಸಿದೆ. ಬಿಜೆಪಿಯ ಈ ಹೊಸ ಪ್ರಯೋಗಕ್ಕೆ ನಾಳೆ ಮತದಾರರು ಯಾವ ರೀತಿ ಸ್ಪಂದಿಸುತ್ತಾರೋ ಕಾದು ನೋಡಬೇಕು.

ರಾಜ್ಯ ರಾಜಕೀಯದಲ್ಲಿ ಇದ್ದ ಕುಮಾರಸ್ವಾಮಿ, ಕೇಂದ್ರ ರಾಜಕಾರಣಕ್ಕೆ ತೆರಳಲು ಮಂಡ್ಯ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿದಿದ್ದಾರೆ.

ವಿಧಾನ ಪರಿಷತ್ತಿನ ಪ್ರತಿಪಕ್ಷದ ನಾಯಕ ಆರ್. ಕೋಟ ಶ್ರೀನಿವಾಸ ಪೂಜಾರಿ ಬಿಜೆಪಿಯಿಂದ ಕಣಕ್ಕಿಳಿದಿದ್ದು, ಅವರ ವಿರುದ್ಧ ಮಾಜಿ ಸಂಸದ ಜಯಪ್ರಕಾಶ್ ಹೆಗಡೆ ಮತ್ತೆ ಅದೃಷ್ಟ ಪರೀಕ್ಷೆ ಮಾಡುತ್ತಿದ್ದಾರೆ.

ಇನ್ನು ಬಿಜೆಪಿ ದಕ್ಷಿಣ ಕನ್ನಡ ಕ್ಷೇತ್ರದಲ್ಲಿ ಬಿಜೆಪಿ ಸೇನೆಯಲ್ಲಿ ಸೇವೆ ಸಲ್ಲಿಸಿರುವ ಬ್ರಿಜೇಶ್ ಚೌಟ ಅವರನ್ನು ಕಣಕ್ಕಿಳಿಸಿ ಹೊಸ ಪ್ರಯೋಗ ಮಾಡಿದ್ದರೆ, ಅವರ ಪ್ರತಿಸ್ಪರ್ಧಿಯಾಗಿ ಕಾಂಗ್ರೆಸ್‌ನಿಂದ ಪದ್ಮರಾಜ್ ಕಣದಲ್ಲಿದ್ದಾರೆ.

ಶಿಕ್ಷಣ ಕ್ಷೇತ್ರ ಮತ್ತು ಬೃಹತ್ ಉದ್ಯಮಿ ಎಂ.ಆರ್.ಸೀತಾರಾಂ ಪುತ್ರ ರಕ್ಷಾ ರಾಮಯ್ಯ ಅವರನ್ನು ಕಾಂಗ್ರೆಸ್ ಚಿಕ್ಕಬಳ್ಳಾಪುರದಿಂದ ಕಣಕ್ಕಿಳಿಸಿದ್ದು, ಅವರ ಪ್ರತಿಸ್ಪರ್ಧಿಯಾಗಿ ಮಾಜಿ ಸಚಿವ ಡಾ.ಕೆ.ಸುಧಾಕರ್ ಬಿಜೆಪಿಯಿಂದ ಕಣಕ್ಕಿಳಿದಿದ್ದಾರೆ.

ಉಡುಪಿ-ಚಿಕ್ಕಮಗಳೂರು ಪ್ರತಿನಿಧಿಸುತ್ತಿದ್ದ ಶೋಭಾ ಕರಂದ್ಲಾಜೆ ಬೆಂಗಳೂರು ಉತ್ತರದಿಂದ ಕಣಕ್ಕಿಳಿದು ಅದೃಷ್ಟ ಪರೀಕ್ಷೆಗೆ ಮುಂದಾಗಿದ್ದಾರೆ. ಇವರ ಎದುರು ಐಐಎಂನ ಪ್ರೊ.ರಾಜುಗೌಡ ಕಾಂಗ್ರೆಸ್ ಅಭ್ಯರ್ಥಿ.

ಮಾಜಿ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ವಿಜಾಪುರದಿಂದ ಬಂದು ಚಿತ್ರದುರ್ಗ ಮೀಸಲು ಕ್ಷೇತ್ರದಲ್ಲಿ ಕಣಕ್ಕಿಳಿದಿದ್ದಾರೆ.

ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಮ್ಮ ಪುತ್ರ ಸುನೀಲ್ ಬೋಸ್ ಅವರನ್ನು ಚಾಮರಾಜನಗರ ಮೀಸಲು ಕ್ಷೇತ್ರದಿಂದ ಅದೃಷ್ಟ ಪರೀಕ್ಷೆಗೆ ಇಳಿಸಿದ್ದಾರೆ. ವಿಶೇಷವೆಂದರೆ ಸಿದ್ದರಾಮಯ್ಯ ಪ್ರತಿನಿಧಿಸುವ ವರುಣಾ ಕ್ಷೇತ್ರವು ಮೈಸೂರು ಜಿಲ್ಲೆಯಲ್ಲಿದ್ದರೂ, ಚಾಮರಾಜನಗರ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಆದ್ದರಿಂದ ಮುಖ್ಯಮಂತ್ರಿ ಅವರಿಗೆ ಈ ಕ್ಷೇತ್ರವೂ ಪ್ರತಿಷ್ಠೆಯಾಗಿದೆ.

ಬೆಂಗಳೂರು ಗ್ರಾಮಾಂತರದಲ್ಲಿ ಶಿವಕುಮಾರ್ ತಮ್ಮ ಸಹೋದರ ಸುರೇಶ್ ಅವರನ್ನು ನಾಲ್ಕನೇ ಬಾರಿಗೆ ಮರು ಆಯ್ಕೆ ಬಯಸಿ ಕಣಕ್ಕಿಳಿಸಿದ್ದಾರೆ.

ಕಳೆದ ಚುನಾವಣೆಯಲ್ಲಿ ಈ ಕ್ಷೇತ್ರ ಹೊರತುಪಡಿಸಿ, ಕಾಂಗ್ರೆಸ್ ಯಾವುದೂ ಖಾತೆ ತೆರೆದಿರಲಿಲ್ಲ. ಆದ್ದರಿಂದ ಬಿಜೆಪಿ ಈ ಕ್ಷೇತ್ರವನ್ನು ವಶಪಡಿಸಿಕೊಳ್ಳಲು ಹೊಸ ಪ್ರಯೋಗ ನಡೆಸಿದೆ.

ಇದೇ ಮೊದಲ ಬಾರಿಗೆ ಬಿಜೆಪಿ ಮತ್ತು ಜೆಡಿಎಸ್ ಒಂದಾಗಿ ಆಡಳಿತಾರೂಢ ಕಾಂಗ್ರೆಸ್ ಅನ್ನು ನೇರ ಹಣಾಹಣಿಯಲ್ಲಿ ಎದುರಿಸುತ್ತಿವೆ, ಈ ಮೈತ್ರಿಗೆ ಮತದಾರರು ಯಾವ ರೀತಿ ಸ್ಪಂದಿಸುತ್ತಾರೆ ಎಂಬುದನ್ನು ಕಾದು ನೋಡಬೇಕು.

ಹದಿನಾಲ್ಕು ಕ್ಷೇತ್ರಗಳಲ್ಲೂ ಮೇಲ್ನೋಟಕ್ಕೆ ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿಗಳ ನಡುವೆಯೇ ನೇರ ಹಣಾಹಣಿ ನಡೆದಿದೆ. ಇವರಲ್ಲಿ ಮತದಾರರ ಒಲವು ಯಾರ ಕಡೆ ಇದೆ ಎಂಬುದು ನಾಳೆ ನಿರ್ಧಾರವಾಗಲಿದೆ.

ಈ ಕ್ಷೇತ್ರಗಳಿಗೆ ಏಪ್ರಿಲ್ 26ರಂದು ಮತದಾನ ನಡೆದರೂ ಜೂನ್ 4ರವರೆಗೆ ಫಲಿತಾಂಶಕ್ಕೆ ಕಾಯಬೇಕಿದೆ.

# ಮೋದಿಜೀ ಅಂತಹ ನಾಯಕ ಮತ್ತೆ ಸಿಗೋಲ್ಲ

(3ನೇ ಪುಟದಿಂದ) ಎಂದು ಮನವಿ ಮಾಡಿದರು.

60 ವರ್ಷಗಳ ಕಾಲ ಈ ದೇಶದ ಜನರ ಹಣ ಲೂಟಿ ಮಾಡಿದ ಕಾಂಗ್ರೆಸ್ ಈಗ ನಿಮ್ಮ ಮರಣದ ನಂತರ ನಿಮ್ಮ ಆಸ್ತಿಯಲ್ಲಿ ಶೇ.55 ರಷ್ಟು ಪಾಲು ಸರ್ಕಾರಕ್ಕೆ, 45 ರಷ್ಟು ಪಾಲು ಆಸ್ತಿಯ ಒಡೆಯರ ವಾರಸುದಾರರಿಗೆ ಎನ್ನುವ ಬಗ್ಗೆ ಚಿಂತನೆ ನಡೆಸುತ್ತಿದೆ. ಇದು ಈ ದೇಶದ ಜನರಿಗೆ ಮಾಡುತ್ತಿರುವ ಮಹಾ ಮೋಸವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಮಾತನಾಡಿ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ, ಅವರ ಬ್ರದರ್ಸ್‌ಗಳ ಗೂಂಡಾ ವರ್ತನೆ, ಭಯೋತ್ಪಾದನೆ ಹೆಚ್ಚಾಗುತ್ತದೆ ಎನ್ನುವುದಕ್ಕೆ ಅನೇಕ ಸಾಕ್ಷಿಗಳಿವೆ ಎಂದರು.

ಮೋದಿ ಜೀ ಪ್ರಧಾನಿಯಾದ ಮೇಲೆ ದೇಶದಲ್ಲಿ ಭಯೋತ್ಪಾದನೆ ಮಟ್ಟಹಾಕಿದ್ದರು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಮತ್ತೆ ಜಿಹಾದಿಗಳು ತಲೆ ಎತ್ತುತ್ತಿದ್ದಾರೆ. ಅಂತಹವರು ತಲೆ ಎತ್ತ ಬಾರದು ಎಂದರೆ, ನಾವು-ನೀವು ಮೋದಿ ಅವರನ್ನು ಮತ್ತೆ ಪ್ರಧಾನಿ ಮಾಡಬೇಕು. ಅವರು ಪ್ರಧಾನಿ ಆಗಬೇಕು ಎಂದರೆ, ಇಲ್ಲಿ ಗಾಯತ್ರಿ ಅವರು ಹೆಚ್ಚು ಮತಗಳ ಅಂತರದಿಂದ ಗೆದ್ದು ದೆಹಲಿಗೆ ಹೋಗಬೇಕು. ಈ ನಿಟ್ಟಿನಲ್ಲಿ ನಮ್ಮ ಕಾರ್ಯಕರ್ತರು ಮನೆ ಮನೆಗೂ ತೆರಳಿ ಗಾಯಿತ್ರಿ ಅವರ ಪರ ಮತಯಾಚಿಸಬೇಕು ಎಂದು ಕರೆ ನೀಡಿದರು.

> **ಕಾಂಗ್ರೆಸ್ ಸರ್ಕಾರ 60 ವರ್ಷಗಳ ಕಾಲ ಜನರ ಕೈಗೆ ಚೊಂಬು, ಬಯಲು ಶೌಚಾಲಯಕ್ಕೆ ಪ್ರೋತ್ಸಾಹ ಕೊಟ್ಟಿತ್ತು. ಮೋದಿ ಜೀ ನೇತೃತ್ವದ ಸರ್ಕಾರ ಕೇವಲ 5 ವರ್ಷಗಳಲ್ಲಿ ಸ್ವಚ್ಛಭಾರತ್ ಮಿಷನ್ ಯೋಜನೆ ಅಡಿ ಬಯಲು ಶೌಚಾಲಯ ಮುಕ್ತ ದೇಶವನ್ನಾಗಿ ಮಾಡಿ, ಮಹಿಳೆಯರ, ಪುರುಷರ ಗೌರವ ಉಳಿಸಲು ಶೌಚಾಲಯ ನಿರ್ಮಾಣ ಮಾಡಿಕೊಟ್ಟಿದೆ. ದಾವಣಗೆರೆ ಜಿಲ್ಲೆ ಒಂದರಲ್ಲೇ 1.71 ಲಕ್ಷ ಶೌಚಾಲಯ ಕಟ್ಟಿಸಿಕೊಟ್ಟಿದ್ದಾರೆ. ಹೀಗಿದ್ದರೂ ಕಾಂಗ್ರೆಸ್‌ನವರು ಈಗಲೂ ಬೀದಿ ಬೀದಿಗಳಲ್ಲಿ ಚೊಂಬು ಹಿಡಿದುಕೊಂಡು ಓಡಾಡುತ್ತಿದ್ದಾರೆ.**
>
> **- ಗಾಯತ್ರಿ ಸಿದ್ದೇಶ್ವರ, ಬಿಜೆಪಿ ಅಭ್ಯರ್ಥಿ**

ಮಂಡಲ ಅಧ್ಯಕ್ಷ ಸುರೇಶ್, ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಸ್.ಜಗದೀಶ್, ಬಿಜೆಪಿ ಮುಖಂಡ ಮಹೇಶ್, ಕುಬೇರಪ್ಪ, ಸಂತೋಷ್ ಕುಮಾರ್, ಎಲ್.ಕೆ ಮಂಜಪ್ಪ, ಪ್ರಭು, ರವಿ, ಹೊನ್ನಪ್ಪ, ರಾಮಣ್ಣ, ಶಾಂತರಾಜ್ ಪಾಟೀಲ್, ಹನುಮಂತಪ್ಪ, ಅರಕೆರೆ ನಾಗರಾಜ್, ರಂಗನಾಥ್, ಸುರೇಂದ್ರ, ಯೋಗೇಶ್, ಮಂಡಲದ ಸದಸ್ಯರು, ಗ್ರಾಮ ಪಂಚಾಯಿತಿ ಸದಸ್ಯರು, ಬೂತ್ ಮಟ್ಟದ ಅಧ್ಯಕ್ಷರು, ಗ್ರಾಮದ ಬಿಜೆಪಿ ಮುಖಂಡರು ಸೇರಿದಂತೆ ಹೊನ್ನಾಳಿ ವಿಧಾನ ಸಭಾ ಕ್ಷೇತ್ರದ ಮುಖಂಡರು ಇದ್ದರು.

# ಬಿಜೆಪಿ ಅಭ್ಯರ್ಥಿಗೆ ಬೆಂಬಲ ಸೂಚಿಸಿದ ಡಾ. ವೈ.ರಾಮಪ್ಪ

(3ನೇ ಪುಟದಿಂದ) ಸಮಾಜಗಳ ಮುಖಂಡರು, ಸಮಾನ ಮನಸ್ಕರು ಜೊತೆಗೂಡಿ ಚರ್ಚಿಸಿ, ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ದೇಶದ ಐಕ್ಯತೆ ಮತ್ತು ಸುಭದ್ರತೆ ದೃಷ್ಟಿಯಿಂದ ನಾವೆಲ್ಲರೂ, ಯಾವುದೇ ಷರತ್ತು ಇಲ್ಲದೇ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರಿಗೆ ಬೆಂಬಲ ಸೂಚಿಸಿದ್ದು, ಅವರ ಗೆಲುವಿಗಾಗಿ ಕ್ಷೇತ್ರಾದ್ಯಂತ ಪ್ರವಾಸ ಮಾಡಿ, ಮತ ಹಾಕಿಸಲು ಸಂಕಲ್ಪ ಮಾಡಿದ್ದೇವೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮುಖಂಡರಾದ ಕೆ.ಎಚ್. ಚನ್ನಬಸಪ್ಪ, ತಿಮ್ಮಪ್ಪ, ಕೃಷ್ಣಪ್ಪ, ಅಂಜಿನಪ್ಪ ಇದ್ದರು.

# ಬಡವರ ಜೀವನಕ್ಕೆ ಗೃಹಲಕ್ಷ್ಮಿ ಸಹಕಾರಿ

(3ನೇ ಪುಟದಿಂದ) ಹಣವನ್ನು ಫಲಾನುಭವಿಗಳಿಗೆ ವಿತರಿಸಲಾಗಿದೆ ಎಂದರು.

ಜಗಳೂರು ಮತ್ತು ಹರಪನಹಳ್ಳಿ ತಾಲ್ಲೂಕುಗಳು ಜೋಡಿ ತಾಲ್ಲೂಕುಗಳಾಗಿದ್ದು, ಈ ಎರಡೂ ತಾಲ್ಲೂಕುಗಳ ಅಭಿವೃದ್ಧಿಯನ್ನು ಒಟ್ಟೊಟ್ಟಿಗೆ ತೆಗೆದುಕೊಂಡು ಹೋಗಲಾಗುವುದು ಎಂದ ಅವರು ತಾಲ್ಲೂಕಿನಲ್ಲಿ ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗಕ್ಕೆ ಒತ್ತು ನೀಡಲಾಗುವುದು ಎಂದು ತಿಳಿಸಿದರು.

ಜಗಳೂರು ತಾಲ್ಲೂಕು ಬರ ಪ್ರದೇಶ ಇತ್ತೇ ಎಂಬಂತೆ ನೀರಾವರಿ ಪ್ರದೇಶ ಮಾಡಲು ಹೆಚ್ಚಿನ ಒತ್ತು ನೀಡಲಾಗುವುದು. ಈಗಾಗಲೇ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು 22 ಕೆರೆ ಮತ್ತು 57 ಕೆರೆಗಳಿಗೆ ತುಂಗಭದ್ರಾ ನದಿಯಿಂದ ನೀರುಣಿಸುವ ಕೆಲಸ ಮಾಡಿದ್ದು, ಇನ್ನು ಹೆಚ್ಚಿನ ಕೆಲಸ ಮಾಡುವ ಬಗ್ಗೆ ಈಗಾಗಲೇ ರೂಪುರೇಷೆ ತಯಾರಿಸಲಾಗಿದ್ದು, ಇದರಲ್ಲಿ ನಾನೂ ಸಹ ಭಾಗಿಯಾಗುತ್ತಿರುವುದು ಹರುಷ ತಂದಿದೆ ಎಂದರು.

ಜಗಳೂರು ತಾಲ್ಲೂಕಿನ ಪ್ರತಿ ಗ್ರಾಮಗಳಿಗೂ ಕುಡಿವ ನೀರಿನ ಸೌಲಭ್ಯ ಕಲ್ಪಿಸಲಾಗುವುದು. ಇದಕ್ಕಾಗಿ ಕೇಂದ್ರದ ಯೋಜನೆಗಳನ್ನು ಬಳಸಿಕೊಂಡು ಈ ಭಾಗದ ಶಾಸಕರಾದ ದೇವೇಂದ್ರಪ್ಪನವರ ಸಹಕಾರದಿಂದ ಪ್ರತಿ ಮನೆ-ಮನೆಗೂ ನೀರು ಸರಬರಾಜು ಮಾಡಲಾಗುವುದು ಎಂದರು.

ಜಗಳೂರು ತಾಲ್ಲೂಕು ಹಿಂದುಳಿದ ಪ್ರದೇಶ ಎಂದು ನಂಜುಂಡಪ್ಪ ವರದಿಯಲ್ಲಿದ್ದು, ಹಿಂದುಳಿದ ಪ್ರದೇಶದ ಅಭಿವೃದ್ಧಿಗೆ ವರದಿಯಲ್ಲಿರುವಂತೆ ಸಮಗ್ರ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಈ ಸಂದರ್ಭದಲ್ಲಿ ಶಾಸಕರಾದ ಬಿ. ದೇವೇಂದ್ರಪ್ಪ, ಮಾಜಿ ಶಾಸಕರಾದ ಗುರುಸಿದ್ದನ ಗೌಡ್ರು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಷಂಶೀರ್ ಅಹಮದ್, ಬ್ರಾಹ್ಮಣ ಅಭಿವೃದ್ಧಿ ನಿಗಮದ ಅಧ್ಯಕ್ಷ ಅಸಗೋಡು ಜಯಸಿಂಹ, ಕೆ.ಪಿ. ಪಾಲಯ್ಯ, ಮುಖಂಡರಾದ ಡಾ.ಟಿ.ಜಿ. ರವಿಕುಮಾರ್, ಕಲ್ಲೇಶ್ ರಾಜ್ ಪಾಟೀಲ್, ಸುರೇಶ್ ಗೌಡ್ರು, ಪಾಟೀಲ್ ಸೇರಿದಂತೆ ಅನೇಕ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ಹೊನ್ನಾಳಿ : ಮಳೆಗೆ ಧರೆಗುರುಳಿದ ಮರಗಳು



ಹೊನ್ನಾಳಿ, ಏ. 25 - ಈಚೆಗೆ ಸುರಿದ ಮಳೆ, ಬಿರುಗಾಳಿಯ ಪರಿಣಾಮ ಹೊನ್ನಾಳಿ ತಾಲ್ಲೂಕಿನ ಸೊರಟೂರು, ತುಗ್ಗಲಹಳ್ಳಿ, ಕೆಂಚಿಕೊಪ್ಪ ಮಾರ್ಗದಲ್ಲಿ ಧರೆಗುರುಳಿದ ಮರಗಳನ್ನು ಸೊರಟೂರು ಗ್ರಾ.ಪಂ. ಅಧ್ಯಕ್ಷ ಬಸವನಗೌಡ ಪಾಟೀಲ್ ಬೆಸ್ಕಾಂ ಸಿಬ್ಬಂದಿಯೊಂದಿಗೆ ತೆರವುಗೊಳಿಸಿದರು.

# ಕಾಂಗ್ರೆಸ್‌ಗೆ ಮತ ನೀಡಿದರೆ ನಷ್ಟ, ಬಿಜೆಪಿಗೆ ಕೊಟ್ಟರೆ ಲಾಭ



(3ನೇ ಪುಟದಿಂದ) ಒಳಗಾಗಿದೆ. ಇದರಿಂದ ವಿಚಲಿತರಾಗಿ ಅವರಿಗೆ ಸೋಲಿನ ಭೀತಿ ಆವರಿಸಿದೆ. ಕೇಂದ್ರದಲ್ಲಿ 10 ವರ್ಷಗಳ ಕಾಲ ಆಡಳಿತ ಮಾಡಿದ ಬಿಜೆಪಿ ಸರ್ಕಾರ ಯಾವುದೇ ರೀತಿಯ ಭ್ರಷ್ಟಾಚಾರ ಮಾಡದೇ, ಭ್ರಷ್ಟಾಚಾರ ಮುಕ್ತ ಆಡಳಿತ ನೀಡಿ ಜನಪರವಾದ ಆಡಳಿತ ಕೊಟ್ಟಿದೆ ಎಂದು ಹೇಳಿದರು.

ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್ ಮಾತನಾಡಿ, ಹರಿಹರ ಕ್ಷೇತ್ರದ ಮೇಲೆ ಜಿಲ್ಲಾ ಉಸ್ತುವಾರಿ ಸಚಿವರು ಮಲತಾಯಿ ಧೋರಣೆ ಮಾಡುತ್ತಿರುವುದರಿಂದ ಅಭಿವೃದ್ಧಿ ಕುಂಠಿತವಾಗಿದೆ. ಕಾಂಗ್ರೆಸ್‌ನ ಸ್ಥಳೀಯ ನಾಯಕರಿಗೆ ಚುನಾವಣೆ ಬಂದಾಗ ಭೈರನಪಾದ, ಅಗಸನಕಟ್ಟೆ ನೆನಪಾಗುತ್ತದೆ ಮತ್ತು ಮೆಡಿಕಲ್ ಕಾಲೇಜು, ಕೈಗಾರಿಕಾ ಕಾರಿಡರ್, ಮಾಡುವುದಾಗಿ ಹೇಳಿ ಜನರನ್ನು ಮರಳು ಮಾಡಿದ್ದಾರೆ ಎಂದು ಕಿಡಿ ಕಾರಿದರು.

ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಹಿಂದೆ ಹೆಚ್.ಶಿವಪ್ಪನವರೊಂದಿಗೆ ರೋಡ್ ಶೋ ಮಾಡಿದ್ದು ಬಿಟ್ಟರೆ, ಇದುವರೆಗೂ ನಾವು ಜೆಡಿಎಸ್‌ನ ಶಿವಶಂಕರ್ ಜೊತೆಗೆ ಯಾವುದೇ ರೀತಿಯ ರೋಡ್ ಶೋ ಮಾಡಿರಲಿಲ್ಲ. ಆದರೆ, ಈಗ ಮತ್ತೊಮ್ಮೆ ಆ ಅವಕಾಶ ಬಂದಿದ್ದು, ಕ್ಷೇತ್ರದಲ್ಲಿ ಎರಡು ಪಕ್ಷವು ಜೊತೆಯಲ್ಲಿ ಕೆಲಸವನ್ನು ಮಾಡುತ್ತಿರುವುದರಿಂದ ಮತದಾರರಿಗೆ ಹುರುಪು ಹೆಚ್ಚಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಅಶ್ವಿನಿ ಜಿ.ಎಂ. ಸಿದ್ದೇಶ್ವರ, ಜಿಲ್ಲಾ ಬಿಜೆಪಿ ಸಂಚಾಲಕ ಹನಗವಾಡಿ ಎಸ್.ಎಂ. ವೀರೇಶ್, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ.ಚಿದಾನಂದಪ್ಪ, ತಾಲ್ಲೂಕು ಅಧ್ಯಕ್ಷ ಪರಮೇಶ್ವರಪ್ಪ, ಬಿಜೆಪಿ ಜಿಲ್ಲಾ ಅಧ್ಯಕ್ಷ ರಾಜಶೇಖರ್ ನಾಗಪ್ಪ, ಕಾರ್ಯದರ್ಶಿ ಅಣ್ಣಪ್ಪ ಐರಣಿ, ತಾಲ್ಲೂಕು ಅಧ್ಯಕ್ಷ ಲಿಂಗರಾಜ್, ನಗರ ಅಧ್ಯಕ್ಷ ಅಜಿತ್ ಸಾವಂತ್, ನಗರಸಭೆ ಸದಸ್ಯರಾದ ಗುತ್ತೂರು ಜಂಬಣ್ಣ, ಅಶ್ವಿನಿ ಕೃಷ್ಣ, ಹನುಮಂತಪ್ಪ, ಪಿ.ಎನ್.ವಿರೂಪಾಕ್ಷಪ್ಪ, ದಿನೇಶ್ ಬಾಬು, ಜೆಡಿಎಸ್ ಹಾಗೂ ಬಿಜೆಪಿ ಪಕ್ಷದ ಮುಖಂಡರಾದ ಎನ್.ಜಿ. ನಾಗನಗೌಡ್ರು, ಪೂಜಾರ್ ಚಂದ್ರಶೇಖರ್, ಹಲಸಬಾಳು ಶಿವಾನಂದಪ್ಪ, ಬೆಳ್ಳೂಡಿ ರಾಮಚಂದ್ರಪ್ಪ, ದೀಟೂರು ಶೇಖರಪ್ಪ, ಅಡಕಿ ಕುಮಾರ್, ಹೆಚ್.ಮಂಜನಾಯ್ಕ್, ತುಳಜಪ್ಪ ಭೂತೆ, ರಾಜು ರೋಖಡೆ, ಸುನಿಲ್, ಮಾರುತಿ ಶೆಟ್ಟಿ, ಅಮರಾವತಿ ನಾಗರಾಜ್, ಗಂಗನಹರಸಿ ಅಬ್ಲೂರಪ್ಪ, ಉಮೇಶ್, ದಿಟೂರು ವಾಮದೇವ್, ಗಿರೀಶ್ ಗೌಡ, ಮುದ್ದೇರ್ ಹನುಮಂತಪ್ಪ, ಕಾಳೇರ್ ಮಂಜುನಾಥ್, ಕಲ್ಕಯ್ಯ, ಲತಾ ಕೊಟ್ರೇಶ್, ಮಮತಾ ಬೆಲ್ಲದ, ರೂಪಾ ಕಾಟ್ವೆ, ಲಕ್ಷ್ಮೀ ರಾಜಾಚಾರ್, ಸುನಂದಾ, ರಾಗಿಣಿ, ಮಮತಾ, ರೂಪಾ ಶಶಿಕಾಂತ್, ಸಾಕ್ಷಿ ಶಿಂದೆ, ಅಂಬುಜಾ ಪಿ.ರಾಜೋಳ್ಳಿ, ಮಲೇಬೆನ್ನೂರು ವಿಜಯಕುಮಾರ್, ದೇವೇಂದ್ರಪ್ಪ, ಪೂಜಾರ್ ಈರಣ್ಣ, ರೇವಣಸಿದ್ದಪ್ಪ, ಯೋಗೀಶ್ ಅಮರಾವತಿ, ಪ್ರಶಾಂತ್, ರಶ್ಮಿ ಮೆಹರ್ವಾಡೆ, ಸುಧಾ ಸೋಳಂಕಿ, ಶಿವಪ್ರಕಾಶ್ ಶಾಸ್ತ್ರಿ ಇತರರು ಹಾಜರಿದ್ದರು.

# ಜೆಇಇ ಮೇನ್ಸ್‌ನಲ್ಲಿ ನಗರದ ಮಾಗನೂರು ಬಸಪ್ಪ ಕಾಲೇಜಿಗೆ ರ‍್ಯಾಂಕ್

ದಾವಣಗೆರೆ, ಏ. 25 - ಐ.ಐ.ಟಿ, ಎನ್.ಐ.ಟಿ, ಐ.ಐ.ಐ.ಟಿ, ಇಂಜಿನಿಯರಿಂಗ್ ಪದವಿಯ ಪ್ರವೇಶಕ್ಕೆ 2024 ರಲ್ಲಿ ನಡೆಸಲಾದ ಜೆ.ಇ.ಇ ಮೇನ್ಸ್ ಪರೀಕ್ಷೆಯಲ್ಲಿ ಮಾಗನೂರು ಬಸಪ್ಪ ಪಿಯು ಕಾಲೇಜಿನ ವಿದ್ಯಾರ್ಥಿ ವರುಣ್ ಎಂ.ಎಸ್. ರಾಷ್ಟ್ರಮಟ್ಟದಲ್ಲಿ 144 ನೇ ರ‍್ಯಾಂಕ್ ಪಡೆದಿರುತ್ತಾನೆ.

ಭರತ್ ಹೆಚ್.ಆರ್ 197 ನೇ ರ‍್ಯಾಂಕ್, ಭರತ್ ಬಿ.ಪಿ 230 ನೇ ರ‍್ಯಾಂಕ್, ಚಂದನ ಕೆ.ಎಲ್ 239 ನೇ ರ‍್ಯಾಂಕ್, ಅಲಂಕಾರ್ ಹೆಚ್.ಜಿ 264 ನೇ ರ‍್ಯಾಂಕ್, ಅಪೇಕ್ಷ ಎಂ 298 ನೇ ರ‍್ಯಾಂಕ್, ಶಶಿಧರ ಜಿ 333ನೇ ರ‍್ಯಾಂಕ್, ಸಂಜಯ್ ಕುಮಾರ್ ಯರೇಶೀಮೆ 370 ನೇ ರ‍್ಯಾಂಕ್ ಪಡೆದಿರುತ್ತಾರೆ.

500 ರ‍್ಯಾಂಕ್ ಒಳಗೆ 9 ವಿದ್ಯಾರ್ಥಿಗಳು, 2000 ರ‍್ಯಾಂಕ್ ಒಳಗೆ 13 ವಿದ್ಯಾರ್ಥಿಗಳು ಉತ್ತಮ ರ‍್ಯಾಂಕ್‌ಗಳನ್ನು ಗಳಿಸಿರುತ್ತಾರೆ. ಮಾಗನೂರು ಬಸಪ್ಪ ಕಾಲೇಜಿನ ಒಟ್ಟು 29 ವಿದ್ಯಾರ್ಥಿಗಳು ಜೆ.ಇ.ಇ. ಅಡ್ವಾನ್ಸ್ ಪರೀಕ್ಷೆ ಬರೆಯಲು ಅರ್ಹತೆಯನ್ನು ಪಡೆದಿದ್ದಾರೆ.

ವಿದ್ಯಾರ್ಥಿಗಳನ್ನು ವಿದ್ಯಾಸಂಸ್ಥೆ ಕಾರ್ಯದರ್ಶಿ ಸಂಗಮೇಶ್ವರ ಗೌಡರು, ನಿರ್ದೇಶಕ ಡಾ. ಜಿ.ಎನ್.ಹೆಚ್.ಕುಮಾರ್, ಪ್ರಾಚಾರ್ಯ ಪ್ರಸಾದ್ ಬಂಗೇರ ಎಸ್. ಅಭಿನಂದಿಸಿದ್ದಾರೆ.

# ನೀತಿ ಸಂಹಿತೆ : 14.32 ಕೋಟಿ ವಿವಿಧ ವಸ್ತುಗಳು ಸೇರಿದಂತೆ ನಗದು ವಶ

ದಾವಣಗೆರೆ, ಏ. 25 - ಲೋಕಸಭಾ ಚುನಾವಣೆಯ ನೀತಿ ಸಂಹಿತೆಯು ಮಾರ್ಚ್ 16 ರಿಂದ ಜಾರಿಯಲ್ಲಿದ್ದು, ಏಪ್ರಿಲ್ 24 ರ ವರೆಗೆ ನೀತಿ ಸಂಹಿತೆ ಉಲ್ಲಂಘನೆಯಡಿ ರೂ. 14,32,07,731 ಮೌಲ್ಯದ ವಿವಿಧ ವಸ್ತುಗಳು, ಮದ್ಯ, ಮಾದಕ ವಸ್ತು ಸೇರಿದಂತೆ ನಗದು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಚುನಾವಣಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ತಿಳಿಸಿದ್ದಾರೆ.

ಜಿಲ್ಲೆಯಾದ್ಯಂತ 32 ಚೆಕ್ ಪೋಸ್ಟ್, 21 ಫ್ಲೈಯಿಂಗ್ ಸ್ಕ್ವಾಡ್, ವಿಡಿಯೋ ಸರ್ವಲೆನ್ಸ್ ತಂಡ, ಅಬಕಾರಿ ಜಾಗೃತ ದಳ, ವಾಣಿಜ್ಯ ತೆರಿಗೆ ಇಲಾಖೆ ತಂಡ ಸೇರಿದಂತೆ ಪೊಲೀಸ್ ಅಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇದರಲ್ಲಿ ಎಫ್‌ಎಸ್‌ಟಿಯಿಂದ ರೂ. 75,62,100 ನಗದು ವಶ, ಎಸ್‌ಎಸ್‌ಟಿಯಿಂದ ರೂ. 95,35,536 ನಗದು ವಶ, ಎಫ್.ಎಸ್.ಟಿ.ಯಿಂದ 400 ಟವರ್ ಫ್ಯಾನ್, 56.36 ಗ್ರಾಂ ಚಿನ್ನ, 579 ಸೀರೆಗಳನ್ನು ವಶಪಡಿಸಿಕೊಂಡಿದ್ದು, ಇದರ ಮೌಲ್ಯ ರೂ.8,26,530 ಗಳಾಗಿರುತ್ತದೆ. ಚೆಕ್‌ಪೋಸ್ಟ್‌ಗಳಲ್ಲಿ 17 ಮೊಬೈಲ್, 300 ಜೀನ್ಸ್ ಪ್ಯಾಂಟ್, ರೂ. 12,52,02,115 ಮೌಲ್ಯದ 20.874 ಕೆ.ಜಿ. ಬಂಗಾರ ಸೇರಿ ರೂ. 12,60,98,095 ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಇದಲ್ಲದೇ, ಅಬಕಾರಿ ಇಲಾಖೆಯಿಂದ ರೂ. 573013 ಮೌಲ್ಯದ 1570.41 ಲೀ ಮದ್ಯ ವಶಪಡಿಸಿಕೊಂಡಿದೆ. ಪೊಲೀಸ್ ಇಲಾಖೆಯಿಂದ ರೂ.210703.45 ಮೌಲ್ಯದ 542.494 ಲೀ ಮದ್ಯ ಹಾಗೂ ರೂ.12000 ಮೌಲ್ಯದ 158 ಗ್ರಾಂ ಗಾಂಜಾವಶ ಪಡಿಸಿಕೊಂಡಿದೆ. ಇಲ್ಲಿಯವರೆಗೆ ವೆಚ್ಚಕ್ಕೆ ಸಂಬಂಧಿಸಿದ 3 ಎಫ್‌ಐಆರ್ ಹಾಗೂ 2 ಎಫ್‌ಎಸ್‌ಟಿಯಿಂದ ಹಾಗೂ ಅಬಕಾರಿ ಕಾಯಿದೆಯಡಿ 728 ಪ್ರಕರಣಗಳು ದಾಖಲಿಸಲಾಗಿವೆ.

# ಮುಸ್ಲಿಂ ಸಮುದಾಯಕ್ಕೆ ಮೀಸಲಾತಿ

(3ನೇ ಪುಟದಿಂದ) ಸಾಧ್ಯವಾಗಲಿದೆ. ಇಡೀ ಮುಸ್ಲಿಂ ಸಮುದಾಯವನ್ನು ಹಿಂದುಳಿದವರು ಎಂದು ಗುರುತಿಸುವ ಮೂಲಕ ಆ ಸಮುದಾಯದಲ್ಲಿನ ವೈವಿಧ್ಯತೆ ಹಾಗೂ ಸಂಕೀರ್ಣತೆಗಳನ್ನು ಕಡೆಗಣಿಸಲಾಗಿದೆ ಎಂದೂ ಆಯೋಗ ಹೇಳಿದೆ. ಈ ಬಗ್ಗೆ ರಾಜ್ಯ ಸರ್ಕಾರ ನೀಡಿರುವ ಪ್ರತಿಕ್ರಿಯೆ ತೃಪ್ತಿಕರವಾಗಿಲ್ಲ. ಈ ಬಗ್ಗೆ ಕರ್ನಾಟಕದ ಮುಖ್ಯ ಕಾರ್ಯದರ್ಶಿ ಕರೆಸಿ ವಿವರಣೆ ಕೇಳಲಾಗುವುದು ಎಂದು ಆಹಿರ್ ಹೇಳಿದ್ದಾರೆ. ಮುಸ್ಲಿಂ ಸಮುದಾಯದ ಎಲ್ಲಾ ಜಾತಿಗಳನ್ನು 2ಬಿ ಅಡಿ ಹಿಂದುಳಿದವರು ಎಂದು ಗುರುತಿಸಲಾಗಿದೆ ಎಂದು ರಾಜ್ಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ತಿಳಿಸಿತ್ತು.

# 28-29ರಂದು ಮೋದಿ ರಾಜ್ಯ ಪ್ರವಾಸ

(3ನೇ ಪುಟದಿಂದ) ಗದ್ದಿಗೌಡರ್, ಸಂಸದ ಸಿದ್ದೇಶ್ವರ್ ಅವರ ಪತ್ನಿ ಗಾಯತ್ರಿ ಸಿದ್ದೇಶ್ವರ್ ಕಣಕ್ಕಿಳಿದಿರುವ ಕ್ಷೇತ್ರಗಳಲ್ಲಿ ಪ್ರಧಾನಿ ಮೋದಿ ಚುನಾವಣಾ ಪ್ರಚಾರ ಮಾಡಲಿದ್ದಾರೆ.

# ಮೊದಲ ಹೆಜ್ಜೆ ಇಟ್ಟ ಮತದಾರ

(3ನೇ ಪುಟದಿಂದ) ಮತದಾನ ಮಾಡಲು ಅವಕಾಶ ಮಾಡಿಕೊಟ್ಟಿರುವುದು ಒಳ್ಳೆಯ ನಿರ್ಧಾರ ಎಂದರು. ಈ ಹಿಂದಿನ ಚುನಾವಣೆಗಳಲ್ಲಿ ಮಗ ಹಾಗೂ ಸೊಸೆಯೊಂದಿಗೆ ಮತ ಗಟ್ಟೆಗೆ ಹೋಗಿ ಮತ ಹಾಕುತ್ತಿದ್ದೆ. ಈಗ ಮನೆಯಲ್ಲೇ ಮತದಾನಕ್ಕೆ ಅವಕಾಶ ನೀಡಿದ್ದು, ಇನ್ನಷ್ಟು ಅನುಕೂಲ ತಂದಿದೆ ಎಂದರು.

ಈ ವೇಳೆ ಸಹಾಯಕ ಚುನಾವಣಾಧಿಕಾರಿ ರೇಣುಕಾ, ಇಸ್ಮಾಯಿಲ್, ಚುನಾವಣಾ ಸಿಬ್ಬಂದಿಗಳಾದ ನಾಗರಾಜಪ್ಪ, ಶೌಕತ್ ಅಲಿ, ಸೆಕ್ಟರ್ ಅಧಿಕಾರಿ ಶಾಂತಾನಾಯ್ಕ, ಮೈಕ್ರೋ ಅಬ್ಸರ್‌ವರ್ ಸುಜಿತ್ ಎಸ್.ವಿ, ಬಿ.ಎಲ್.ಒ. ಅಂಜಲಿ ಉಪಸ್ಥಿತರಿದ್ದರು.


ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
29ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಮಾರ್ಚ್ 23 ರಿಂದ 2 ತಿಂಗಳ ಕಾಲ.
ಇಂದಿನ ಮಜ್ಜಿಗೆ ಪ್ರಾಯೋಜಕರು :-
ದಿ. ಶ್ರೀ ಬಕ್ಕಪ್ಪ ಹಂಸಬಾವಿ ಮತ್ತು ಶ್ರೀಮತಿ ಸರ್ವಮಂಗಳಮ್ಮ ಜ್ಞಾಪಕಾರ್ಥವಾಗಿ ಡಾ. ಹೆಚ್.ಬಿ. ಶಿವಕುಮಾರ್ ಮತ್ತು ಕುಟುಂಬ ವರ್ಗದವರ ಸೇವಾರ್ಥ
ಸ್ಥಳ : ಮಹಾನಗರ ಪಾಲಿಕೆ ಆವರಣ

ಕರ್ನಾಟಕ ಮುಕ್ತ ವಿದ್ಯಾಲಯ (KOS)
ಕೇಂದ್ರ ಹಾಗೂ ರಾಜ್ಯ ಸರ್ಕಾರದ ಶಾಶ್ವತ ಮಾನ್ಯತೆ ಪಡೆದಿದೆ
ಶಿಕ್ಷಣ ವಂಚಿತರಾದವರಿಗೆ ನೇರ ಪರೀಕ್ಷೆ
SSLC/ PUC/ಪದವಿ/ಸ್ನಾತಕೋತ್ತರ ಪದವಿ & ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶ ಪ್ರಾರಂಭ
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 87620 58369, 82173 02649

ಮನೆಗಳು ಮಾರಾಟಕ್ಕಿವೆ
ಎಸ್.ಎಸ್. 'ಬಿ' ಬ್ಲಾಕ್ ದಕ್ಷಿಣ 30x40 ಡುಪ್ಲೆಕ್ಸ್, DC ಮನೆ ಸರ್ಕಲ್ ಹತ್ತಿರ ದಕ್ಷಿಣ 30x50 ಡುಪ್ಲೆಕ್ಸ್ (Hifi) ಮಹಾಲಕ್ಷ್ಮಿ ಲೇಔಟ್ ಪಶ್ಚಿಮ 30x35 (Ground floor) ಶಿವ-ಪಾರ್ವತಿ ಬಡಾವಣೆ ಪಶ್ಚಿಮ 30x45 (ಡುಪ್ಲೆಕ್ಸ್)
ಐಗೂರು ವಿಜಯಕುಮಾರ
99457 02495

ಸೈಟುಗಳು ಮಾರಾಟಕ್ಕಿವೆ
ಹೊಸ ಬನಶಂಕರಿ ಬಡಾವಣೆಯಲ್ಲಿ ಸಂಭ್ರಮ ಹೋಟೆಲ್ ಹಿಂಭಾಗ 30x40 ಪಶ್ಚಿಮ, 30x57 ಪೂರ್ವ ಅಕ್ಕ-ಪಕ್ಕ, ಶಿವ-ಪಾರ್ವತಿ ಬಡಾವಣೆಯಲ್ಲಿ 30x50 ಪಶ್ಚಿಮ, 30x40 ಪಶ್ಚಿಮ ಅಕ್ಕ-ಪಕ್ಕ,
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

Property Hub
• EC
• E-swathu
• Building Licence
• Khatha Change
96118 66449

ಉದ್ಯೋಗಾವಕಾಶ
ಹೆಸರಾಂತ ಕಂಪನಿಗಳಿಗೆ SSLC, PUC, ITI, Diploma, Any Degree ಪಾಸ್/ಫೇಲ್ ಆದ ಹಾಗೂ B.Sc Nursing, GNM Nursing, B.Com Tally ಪಾಸಾಗಿರುವ ಅಭ್ಯರ್ಥಿಗಳು, ಗಾರ್ಮೆಂಟ್ಸ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಸಂಪರ್ಕಿಸಿ :
ಶ್ರೀ ಕಲ್ಪತರು ಏಜೆನ್ಸೀಸ್, ದಾವಣಗೆರೆ.
92411 22555

ಡ್ರೈವರ್, ಲೇಬರ್ ಬೇಕಾಗಿದ್ದಾರೆ
ಸಂಪರ್ಕಿಸಿ :
ಎಸ್.ವಿ. ಮಾರ್ಕೆಟಿಂಗ್
63620 23451, 97434 37003

ಬೇಕಾಗಿದ್ದಾರೆ
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್ ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ. ಭೇಟಿಯ ಸಮಯ ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿಜೆ ಬಡಾವಣೆ ದಾವಣಗೆರೆ.

ಬೇಕಾಗಿದ್ದಾರೆ
1. ಕಾಲೇಜ್ ವಾರ್ಡನ್ (Male & Female)
2. ವಾಹನ ಚಾಲಕರು, 3. ಮಹಿಳಾ ಕಂಡಕ್ಟರ್ ಗಳು
4. ಆಯಾಗಳು 5. ಸೆಕ್ಯೂರಿಟಿ ಗಾರ್ಡ್, ಆಕರ್ಷಕ ಸಂಬಳದೊಂದಿಗೆ, ESI & PF ಸೌಲಭ್ಯವಿದೆ.
ಸಂಪರ್ಕಿಸಿ : ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರ ನಿಟ್ಟುವಳ್ಳಿ - ದಾವಣಗೆರೆ.
9844433059, 8660576847

ಸೈಟುಗಳು ಮಾರಾಟಕ್ಕಿವೆ
KHB ಕಾಲೋನಿ Judge Quatras Circle ಹತ್ತಿರ ಪೂರ್ವ 50x80, ಸರ್ಕಾರಿ ನೌಕರರ ಬಡಾವಣೆ ಸುತ್ತ-ಮುತ್ತ ಪೂರ್ವ 30x40, ಪಶ್ಚಿಮ 30x50, ವಿದ್ಯಾನಗರ ಕಾಫಿ ಡೇ ಸರ್ಕಲ್ ಹತ್ತಿರ ದಕ್ಷಿಣ 50x85
ಐಗೂರು ವಿಜಯಕುಮಾರ
99457 02495

ತಕ್ಷಣ ಬೇಕಾಗಿದ್ದಾರೆ
wholesale ಅಂಗಡಿಗೆ ಟ್ಯಾಲಿ ಬಿಲ್ಲಿಂಗ್ ಆಪರೇಟರ್ ಮತ್ತು ಕ್ಯಾಷಿಯರ್ ಮತ್ತು Delivery supervisor ಬೇಕಾಗಿದ್ದಾರೆ.
ಸಂಪರ್ಕಿಸಿ:
94822 14855

WANTED TEACHERS
Play Group, LKG, UKG with good English Fluency and 2 year Experience in Montessori
83100 69167

ಮಾರಾಟಕ್ಕಿದೆ
ಉತ್ತಮ ಸ್ಥಿತಿಯಲ್ಲಿರುವ ಆಪೇ ಗೂಡ್ಸ್ ಹೊಸ ಆಟೋ (2023 ಮಾಡಲ್) ಮಾರಾಟಕ್ಕಿದೆ.
ಸಂಪರ್ಕಿಸಿ :
72596 35931

ಪ್ರವೇಶ ಪ್ರಕಟಣೆ (ನೇರ ಪರೀಕ್ಷೆ)
10th/SSLC/PUC Science/Arts/Commerce/Senior Secondary Exam- Online/July/October 24
10th ಪಾಸಾದವರು ಮುಂದಿನ ವ್ಯಾಸಂಗ/ ನೌಕರಿ/ಬಡ್ತಿ ಪಡೆಯುವ ಅವಕಾಶ
PUC Science ಪಾಸಾದವರು ಇಂಜಿನಿಯರಿಂಗ್, ನರ್ಸಿಂಗ್, ಫಾರ್ಮಸಿ, ಪ್ಯಾರಾಮೆಡಿಕಲ್, ಡಿಗ್ರಿ ಸೇರಬಹುದು.
Board of Open Schooling & Skill Education Sikkim
Authorised Study Centre
Established by Government of Sikkim
B1- ಜೀಜಾಮಾತಾ ಕಾಲೋನಿ, ಹರ್ಲಾಪುರ ರಸ್ತೆ, ಹರಿಹರ.
B2- ವಿಜಯನಗರ, ಹೊಸ RTO ಆಫೀಸ್ ಹತ್ತಿರ, ದಾವಣಗೆರೆ.
9741746205,7795561852, 8310516354

ಮನೆ ಬಾಡಿಗೆಗೆ / ಲೀಜ್‌ಗೆ ಇದೆ
1ನೇ ಮುಖ್ಯ BIET ರಸ್ತೆ, 1ನೇ ಮಹಡಿಯಲ್ಲಿ 3 ಬೆಡ್ ರೂಂಗಳಿರುವ ವಿಶಾಲ ಹಾಲ್, ಕಿಚನ್, ಪೂಜಾ, ವರಾಂಡಾ, ಸ್ಟೋರ್, ಕೆಳಗೆ 13x26 ಅಡಿ ಇರುವ ಕಾರ್ ಪಾರ್ಕಿಂಗ್.
98444 99799

ಮನೆ, ಶಾಪ್ ಬಾಡಿಗೆಗೆ ಇದೆ
ಶಾಪ್ 2/3 ಬಿ.ಹೆಚ್.ಕೆ. ಪೂರ್ವ ಮುಂಬಾಗಿಲಿನ, ಗ್ರೌಂಡ್ ಫ್ಲೋರ್, ಪಾಲಿಕೆ ನೀರಿನ ಸೌಕರ್ಯವುಳ್ಳ, ಅಟ್ಯಾಚ್ ಬಾತ್ ರೂಮ್, ಮನೆ ಬಾಡಿಗೆಗೆ ಇದೆ. ಮನೆ ನಂ. 408, 8ನೇ ಮುಖ್ಯ, 8ನೇ ಅಡ್ಡ ರಸ್ತೆ, ಪಿ.ಜೆ. ಬಡಾವಣೆ.
99168 62900, 95386 41980

TUITIONS
IGCSE, ICSE, CBSE and State Board from class 5th to 12th MCC A Block
98444 92888


ಬೇಕಾಗಿದ್ದಾರೆ
ಕಾರ್ಯದರ್ಶಿ - BA, B.Com
ಅಕೌಂಟೆಂಟ್ - BA
ಸಹಾಯಕರು - PUC
ಹೆಚ್ಚಿನ ಆದ್ಯತೆ ಮಹಿಳೆಯರಿಗೆ
ಸಂಪರ್ಕಿಸಿ :
88674 95285

WANTED TEACHERS
FOR PRE-SCHOOL
LADY GRADUATES WITH MINIMUM TWO YEARS
Experience In Pre School Teaching, Good in English And Communication Skills.
Call : 63609 93735

WANTED
Billing Staff (Tally) And Accountant With 1-2 Years Experience For Pulses,Rice And Foodgrain Shop. Immediate Joining. Knowledge Of Gst Will Be Prefered. Good Salary Will Be Offered. Send Resume By Whatsup To
98440 78802

TEACHERS WANTED
B.Sc/M.Sc, B.Ed PCM (English)
Vidyasagara School, KB Extn, Davanagere-2.
Contact :
94831 05563

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

Finance Advisor
Full Times Job's Female.
Job Role Telecaller
Work time : 9.30AM to 6.30 PM & every Sunday holiday.
Salary : 6,000 to 10,000 +Incentives.
Qualification : 10th to 12 PUC or Degree.
Age Limit : 19 to 29.
Freshers & experience call or whatsapp
78923 29921, 96326 11005

ಬೇಕಾಗಿದ್ದಾರೆ
ಬ್ಯಾಂಕಿಂಗ್ ಸೆಕ್ಟರ್‌ನಲ್ಲಿ ಕೆಲಸ ಮಾಡಲು ಟೆಲಿಕಾಲರ್ಸ್ ಬೇಕಾಗಿದ್ದಾರೆ. ಉತ್ತಮ ವೇತನ ಮತ್ತು ಇನ್‌ಸೆಂಟಿವ್ಸ್ ಕೊಡಲಾಗುತ್ತದೆ.
94806 56501

ಸುವರ್ಣಾವಕಾಶ
ನಿವೃತ್ತಿಯಾದವರಿಗೂ ಹಾಗೂ ನಿರುದ್ಯೋಗಿಗಳಿಗೆ ಒಂದು ಒಳ್ಳೆಯ ಸುವರ್ಣಾವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ಈ ಕೆಳಗಿನ ನಂಬರ್‌ಗೆ ಸಂಪರ್ಕಿಸಿ:
99016 32524

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
ಹಿಂದೂ ವಧು-ವರರ ಮಾಹಿತಿ ಕೇಂದ್ರ
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

ಶ್ರೀ ದುರ್ಗಾಪರಮೇಶ್ವರಿ ಸರ್ವಿಸ್ ಸೆಂಟರ್
1. ಗಾರೆ ಕೆಲಸ 2. ಪೇಂಟಿಂಗ್ 3. ಎಲೆಕ್ಟ್ರಿಷಿಯನ್ 4. ಕಾರ್ಪೆಂಟರ್ 5. ಸಂಪ್ ಕ್ಲೀನಿಂಗ್ 6. ಹೌಸ್ ಕ್ಲೀನಿಂಗ್ 7. ಟೈಲ್ಸ್ ಮತ್ತು ಆ ಶೀಟ್ ವರ್ಕ್ ಗಳನ್ನು ಮಾಡುತ್ತೇವೆ 8. ಪ್ಲಂಬರ್ ವರ್ಕ್ ನಾವು ಬಂದು ಈ ಕೆಲಸಗಳನ್ನುಕಡಿಮೆ ದರದಲ್ಲಿ ಮಾಡಿಕೊಡುತ್ತೇವೆ ಸಂಪರ್ಕಿಸಿ :
73535 07622

ಸೈಟುಗಳು ಮಾರಾಟಕ್ಕಿವೆ
ಬಸವೇಶ್ವರ 30x50, 30x50
ಶಿವ-ಪಾರ್ವತಿ 30x40, 30x40
ಎಂ.ಸಿ.ಸಿ. 'ಬಿ' ಬ್ಲಾಕ್ 40x65, 40x60
ಮಹಾಲಕ್ಷ್ಮಿ ಲೇಔಟ್ 30x40, 30x40
99643 16777

ನೇರ ಪರೀಕ್ಷೆ ಕಟ್ಟಲು/ರೆಗ್ಯುಲರ್ ಪ್ರವೇಶಕ್ಕಾಗಿ
SSLC ನೇರ ಪರೀಕ್ಷೆ
IInd PUC/Senior Secondary, Arts/Commerce/Science
B.Sc.-Agriculture, B.Tech All branches, D.Pharma, B.Ed., PhD regular B.A., B.com., B.Sc., M.A., M.Com., MBA, MLIB, Correspondence.
ಆಸಕ್ತರು ಫೋಟೋ-8, ಆಧಾರ್ ಕಾರ್ಡ್ ಹಾಗೂ ಮಾರ್ಕ್ಸ್ ಕಾರ್ಡ್‌ನೊಂದಿಗೆ ಸಂಪರ್ಕಿಸಿರಿ.
SS Global Institute for Higher Education
1982-1ನೇ ಮಹಡಿ, ಅನ್ವಯ ಆಯುರ್ವೇದಿಕ್ ಆಸ್ಪತ್ರೆ, ಶ್ರೀ ಸಾಯಿಬಾಬಾ ದೇವಸ್ಥಾನ ಹತ್ತಿರ, ಎಂಸಿಸಿ 'ಎ' ಬ್ಲಾಕ್, ದಾವಣಗೆರೆ-04.
72593 59861/99863 45266
ವಿ. ಸೂ: ಫೀಸನ್ನು ಕಂತಿನಲ್ಲಿ ಪಾವತಿಸಬಹುದು

ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

ಅಧಿಕೃತ ಚೀಟಿ ಸಂಸ್ಥೆ
ರೂ. 5 ಲಕ್ಷ ಚೀಟಿ ಪ್ರಾರಂಭ. 50 ಸದಸ್ಯರು 6500ರೂ. ರಿಂದ 10,000 ರೂ. ವರೆಗೆ
ಸ್ಕಂದ ಚಿಟ್ ಫಂಡ್ಸ್ (ರಿ)
78997 75159

ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

ಟ್ಯಾಂಕ್ ಕ್ಲೀನಿಂಗ್
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

Summer Holidays Tuitions
CBSE & State board - LKG to PU
Grammar & spoken English.
Hand Writing & basic knowledge
SINCHANA ACADEMY
Ram & Co Circle, Davangere.
9019580600 88614 45913

OFFICE SPACE FOR RENT
1, 2 & Basement Floor, (1000Sqft + Lift) ATM / Mobiles Shop Space, PB Road, Opp, RH Office Dvg.
99646 99096

## ಮಾಯಕೊಂಡ : ಇಂದು ಬಿಜೆಪಿ ಅಭ್ಯರ್ಥಿ ಗಾಯತ್ರಿ ಮತ ಪ್ರಚಾರ



ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರು ಮಾಯಕೊಂಡ ವಿಧಾನಸಭಾ ವ್ಯಾಪ್ತಿಯ ಆನಗೋ ಡು, ಬಾಡಾ ಮತ್ತು ಮಾಯಕೊಂಡ ಜಿ.ಪಂ. ವ್ಯಾಪ್ತಿಯಲ್ಲಿ ಇಂದು ಪ್ರಚಾರ ನಡೆಸಲಿದ್ದಾರೆ.

ಬೆಳಿಗ್ಗೆ 9.30ಕ್ಕೆ ತೋಳಹುಣಸೆ, 10ಕ್ಕೆ ಕುರ್ಕಿ, 10.30ಕ್ಕೆ ಗೋಪನಾಳ್, 11ಕ್ಕೆ ಅತ್ತಿಗೆರೆ, 11.45ಕ್ಕೆ ಬಾಡಾದಲ್ಲಿ ಪ್ರಚಾರ ಮಾಡುವರು. ಮಧ್ಯಾಹ್ನ 12.30ಕ್ಕೆ ಅಣಬೇರು, 1 ಗಂಟೆಗೆ ಹುಚ್ಚವ್ವನಹಳ್ಳಿ, 2.30ಕ್ಕೆ ಮಾಯಕೊಂಡ, 3ಕ್ಕೆ ನರಗನಹಳ್ಳಿ, 3.30ಕ್ಕೆ ಕೊಡಗ ನೂರಿನಲ್ಲಿ ಮತಯಾಚನೆ ಮಾಡುವರು. ಸಂಜೆ 4ಕ್ಕೆ ನೇರ್ಲಿಗೆ, 4.30ಕ್ಕೆ ಆನಗೋಡು, 5ಕ್ಕೆ ಹೆಬ್ಬಾಳು, 5.30ಕ್ಕೆ ಹೊನ್ನೂರು ಗ್ರಾಮಗಳಲ್ಲಿ ಪ್ರಚಾರ ನಡೆಸಲಿದ್ದಾರೆ.

## ಹನುಮ ಜನ್ಮೋತ್ಸವ: ನಾಳೆ ಶೋಭಾಯಾತ್ರೆ

ದಾವಣಗೆರೆ, ಏ.25-ಶ್ರೀ ಹನುಮ ಜನ್ಮೋತ್ಸವ ಸಮಿತಿ ವತಿಯಿಂದ ಶ್ರೀ ಹನುಮ ಜನ್ಮೋತ್ಸವ ಪ್ರಯುಕ್ತ 3ನೇ ವರ್ಷದ ಶೋಭಾಯಾತ್ರೆಯನ್ನು ನಾಡಿದ್ದು ದಿನಾಂಕ 27ರ ಶನಿವಾರ ಹಮ್ಮಿಕೊಳ್ಳಲಾಗಿದೆ.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಸಮಿತಿಯ ಸದಸ್ಯ ಎಂ.ಶ್ರೀಕಾಂತ್, ಅಂದು ಸಂಜೆ 4.30ರಿಂದ ನಿಜಲಿಂಗಪ್ಪ ಬಡಾವಣೆಯ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಶೋಭಾ ಯಾತ್ರೆ ಆರಂಭವಾಗಲಿದ್ದು, ಪಿ.ಜೆ. ಬಡಾವಣೆಯ ಖಮಿತ್ಕರ್ ಈಶ್ವರಪ್ಪ ಶ್ರೀರಾಮ ಮಂದಿರದಲ್ಲಿ ಮುಕ್ತಾಯಗೊಳ್ಳಲಿದೆ ಎಂದರು. ಮಾಜಿ ಸೈನಿಕರ ಸಂಘದ ಅಧ್ಯಕ್ಷ ಸತ್ಯಪ್ರಕಾಶ್ ಶೋಭಾಯಾತ್ರೆಗೆ ಚಾಲನೆ ನೀಡಲಿದ್ದು, ನಂತರ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಯರಗುಂಟೆಯ ಶ್ರೀ ಪರಮೇಶ್ವರ ಮಹಾಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಶಿವರಾಜ್ ಕೆ.ಎಸ್., ಮಲ್ಲೇಶ್ ಎನ್. ಪೂಜಾರ್ ಇದ್ದರು.

# ಕಾರ್ಯಕರ್ತರಲ್ಲಿ ಒಗ್ಗಟ್ಟಿದ್ದರೆ ಪಕ್ಷಕ್ಕೆ ಸೋಲೇ ಇಲ್ಲ : ಎಸ್ಸೆಸ್ಸೆಂ

## ಹರಪನಹಳ್ಳಿ : ಕಾಂಗ್ರೆಸ್ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ್ ಪರ ಶಾಸಕರಾದ ಎಂ.ಪಿ. ಲತಾ ನೇತೃತ್ವದಲ್ಲಿ ಪ್ರಚಾರ

ಹರಪನಹಳ್ಳಿ. ಏ.25- ಹರಪನಹಳ್ಳಿ ಕ್ಷೇತ್ರವು ಕಾಂಗ್ರೆಸ್‌ನ ಭದ್ರಕೋಟೆಯಾಗಿದ್ದು, ಇಲ್ಲಿನ ಕಾರ್ಯಕರ್ತರು ಒಗ್ಗಟ್ಟಿನಿಂದ ಪಕ್ಷಕ್ಕಾಗಿ ದುಡಿದರೆ ಕಾಂಗ್ರೆಸ್ಸಿಗೆ ಸೋಲೇ ಇಲ್ಲ ಎಂದು ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹೇಳಿದರು.



ಶಾಸಕಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ನೇತೃತ್ವದಲ್ಲಿ ಹರಪನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತೆಲಿಗಿ, ಹಲವಾಗಲು, ಹುಲಿಕಟ್ಟೆ ಹಾಗೂ ಚಿಗಟೇರಿ ಗ್ರಾಮಗಳಲ್ಲಿ ಮತ ಯಾಚಿಸಿ ಮಾತನಾಡಿದರು.

ನಮ್ಮ ಸರ್ಕಾರ ಪಕ್ಷಾತೀತವಾಗಿ 5 ಗ್ಯಾರಂಟಿಗಳನ್ನು ಸಮಾಜದ ಎಲ್ಲಾ ವರ್ಗಗಳಿಗೂ ಪ್ರಾಮಾಣಿಕವಾಗಿ ತಲುಪಿಸಿ, ತನ್ನ ಶ್ರೇಯಸ್ಸನ್ನು ಹೆಚ್ಚಿಸಿಕೊಂಡಿದೆ ಎಂದರು.

ಎಲ್ಲರಿಗೂ ಕಾಂಗ್ರೆಸ್ ಪಕ್ಷ ಒಳಿತು ಮಾಡಿದೆ. ಈ ನಿಟ್ಟಿನಲ್ಲಿ ನಮ್ಮ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಹೆಚ್ಚಿನ ಮತಗಳಿಂದ ಗೆಲ್ಲಿಸೋಣ ಎಂದರು.

ಮೂರು ಬಾರಿ ಸಂಸದರಾದ ಸಿದ್ದೇಶ್ವರರು, ಭದ್ರಾದಿಂದ ಕೊಂಡಜ್ಜಿ ಕೆರೆಗೆ ನೀರು ಬರುತ್ತಿದ್ದರೂ ಕೊಂಡಜ್ಜಿ ಕೆರೆ ಮಳೆಯಾಶ್ರಿತ ಎಂದು ಸುಳ್ಳು ಹೇಳುತ್ತಾರೆಂದು ವಾಗ್ದಾಳಿ ಮಾಡಿದರು.

ಶಾಸಕಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಮಾತನಾಡಿ, ಬಿಜೆಪಿ -ಜನತಾ ದಳದವರು ಖಾತರಿ ಯೋಜನೆಗಳ ವಿರುದ್ಧ ವ್ಯಂಗ್ಯವಾಡಿದರೂ, ಅದೇ ಯೋಜನೆಗಳನ್ನು ಪ್ರಧಾನ ಮಂತ್ರಿ ಖಾತರಿ ಯೋಜನೆ ಎಂದು ಮರು ನಾಮಕರಣ ಮಾಡುತ್ತಿದ್ದಾರೆ ಎಂದರು.

ನಮ್ಮ ಯೋಜನೆಗಳಿಂದ ಆರ್ಥಿಕತೆ ಕುಸಿಯುತ್ತದೆ ಎಂದ ಬಿಜೆಪಿ ನಾಯಕರು, ಇಂದು ನಮ್ಮನ್ನೇ ಅನುಕರಣೆ ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ಶಾಮನೂರು ಕುಟುಂಬವು ಉತ್ತಮ ಸಮಾಜ ಸೇವೆ ಮಾಡಿದೆ. ಅಭ್ಯರ್ಥಿಯಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಉತ್ತಮ ವ್ಯಕ್ತಿಯಾಗಿದ್ದಾರೆ. ಆದ್ದರಿಂದ ಅವರನ್ನು ಹೆಚ್ಚಿನ ಮತಗಳಿಂದ ಗೆಲ್ಲಿಸುವ ಜತೆಗೆ ರಾಜ್ಯದಿಂದ 20 ಸಂಸದರನ್ನು ಸಂಸತ್ ಭವನಕ್ಕೆ ಕಳುಹಿಸಬೇಕು ಎಂದರು.

ಮಾಜಿ ಸಚಿವ ಪಿ.ಟಿ. ಪರಮೇಶ್ವರ ನಾಯ್ಕ್ ಮಾತನಾಡಿ, ನಮ್ಮ ಪಕ್ಷ ಪಂಚ ಗ್ಯಾರಂಟಿಗಳಿಂದ ಜನರಿಗೆ ಅನುಕೂಲ ಮಾಡಿದೆ. ಆದ್ದರಿಂದ ಕಾರ್ಯಕರ್ತರು ಹಾಗೂ ಪಕ್ಷದ ಮುಖಂಡರು ಬೂತ್ ಮಟ್ಟದಲ್ಲಿ ತಾವೇ ಅಭ್ಯರ್ಥಿ ಎಂದು ಭಾವಿಸಿ ಚುನಾವಣೆ ಎದುರಿಸಬೇಕು ಎಂದು ಮನವಿ ಮಾಡಿದರು.

ಪಕ್ಷದ ಮುಖಂಡ ಎನ್. ಕೊಟ್ರೇಶ್, ವಿಜಯನಗರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶಿರಾಜ್ ಶೇಖ್, ತಾಲ್ಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ. ಅಂಜಿನಪ್ಪ, ಮುಖಂಡರಾದ ಎಂ.ಪಿ. ವೀಣಾ ಮಹಾಂತೇಶ್, ಪುರಸಭೆ ಮಾಜಿ ಅಧ್ಯಕ್ಷ ಎಂ.ರಾಜಶೇಖರ್, ಸಿ. ಚಂದ್ರಶೇಖರ್ ಭಟ್ಟ, ಎಚ್.ಬಿ. ಪರಶುರಾಮಪ್ಪ, ಹಲಗೇರಿ ಮಂಜುನಾಥ, ಹೊಸಕೋಟಿ ನಾಗರಾಜ, ಮುಖಂಡರಾದ ಪ್ರಕಾಶ್ ಪಾಟೀಲ್, ಶಶಿಧರ್ ಪೂಜಾರ್, ಹಾಲೇಶ್ ಗೌಡ, ಪುರಸಭೆ ಸದಸ್ಯರಾದ ಡಿ. ಅಬ್ದುಲ್ ರೆಹಮಾನ್ ಸಾಬ್, ಲಾಟಿ ದಾದಾಪೀರ್, ಜಾಕೀರ್, ಭರತೇಶ್, ಯುವ ಮುಖಂಡ ಪಿ.ಟಿ. ಭರತ್, ಎಚ್.ಕೆ. ಹಾಲೇಶ್, ಭೀಮಪ್ಪ, ಜಾಕೀರ್, ಗುತ್ತಿಗೆದಾರರಾದ ಬಿ. ಅಂಜಿನಪ್ಪ, ಟಿ. ಉಮಾಕಾಂತ, ಮಲ್ಲಿಕಾರ್ಜುನ್ ಸ್ವಾಮಿ ಕಲ್ಮಠ, ಯಡಿಹಳ್ಳಿ ಶೇಖರಪ್ಪ, ಶಿರಗನಹಳ್ಳಿ ಪರುಶುರಾಮಪ್ಪ, ಮಾಗನಹಳ್ಳಿ ಉದಯಶಂಕರ್.ಶಿಂಗ್ರಿಹಳ್ಳಿ ಬಸವರಾಜ, ತೆಲಿಗಿ ಕೆ. ಯೋಗೇಶ್, ಕಡತಿ ಜಗದೀಶ್, ಗುಂಡಗತ್ತಿ ನೇತ್ರಾವತಿ, ದುಗ್ಗಾವತಿ ಮಂಜುನಾಥ್ ಮತ್ತು ಇತರರು ಇದ್ದರು.

## ಬೆಣ್ಣೆ ನಗರಿಯಲ್ಲಿ ಅಕ್ಷರ ದೋಸೋತ್ಸವ

### ದೋಸೆ ಕಾವಲಿಯಲ್ಲಿ ಮೂಡಿದ ಮತದಾನ ಜಾಗೃತಿ



ದಾವಣಗೆರೆ, ಏ. 25 - ದಾವಣಗೆರೆ ಬೆಣ್ಣೆ ನಗರಿ, ಬೆಣ್ಣೆ ದೋಸೆ ಎಂದೇ ಬ್ರಾಂಡ್ ಪಡೆದುಕೊಂಡಿದೆ. ದೋಸೆ ಕಾವಲಿಯಲ್ಲಿ ದೋಸೆಯ ಹಿಟ್ಟನ್ನು ಬಳಸಿ ನಮ್ಮ ಮತ, ನನ್ನ ಹಕ್ಕು, ತಪ್ಪದೇ ಮೇ 7 ರಂದು ಮತದಾನ ಮಾಡಿ ಎಂಬ ಘೋಷಣೆಯನ್ನು ಕಾವಲಿಯಲ್ಲಿ ದೋಸೆಯಲ್ಲಿ ಮೂಡಿ ಬಂದಿತು.

ಗುರುವಾರ ಜಯದೇವ ವೃತ್ತದಲ್ಲಿ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಸ್ವೀಪ್ ಸಮಿತಿಯಿಂದ ಏರ್ಪಡಿಸಲಾದ ದೋಸೆಯ ಮೂಲಕ ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ. ಎಂ.ವಿ ವೆಂಕಟೇಶ್ ಅವರು ನನ್ನ ಮತ, ನನ್ನ ಹಕ್ಕು ಮತ್ತು ಸ್ವೀಪ್ ಸಮಿತಿ ಅಧ್ಯಕ್ಷ ಸುರೇಶ್ ಬಿ.ಇಟ್ನಾಳ್ ಮೈ ವೋಟ್, ಮೈ ವಾಯ್ಸ್ ಮೇ 7 ಎಂದು ದೋಸೆ ಹಿಟ್ಟಿನಲ್ಲಿ ಬಿಡಿಸುವ ಮೂಲಕ ಜಾಗೃತಿ ಮೂಡಿಸಿದರು.

ಜಿಲ್ಲಾಧಿಕಾರಿ ಹಾಗೂ ಚುನಾವಣಾಧಿಕಾರಿ ಮಾತನಾಡಿ, ಅಕ್ಷರ ದೋಸೋತ್ಸವದ ಮೂಲಕ ಮತದಾನ ಜಾಗೃತಿ ಮೂಡಿಸಲಾಗುತ್ತಿದೆ. ದಾವಣಗೆರೆ ಉತ್ತರ, ದಕ್ಷಿಣ ಕ್ಷೇತ್ರದಲ್ಲಿ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಹೆಚ್ಚು ಮತದಾನವಾಗಬೇಕೆಂಬ ಗುರಿ ನಮ್ಮದಾಗಿದೆ ಎಂದರು.

ಈ ವೇಳೆ ಮುಖ್ಯ ಯೋಜನಾಧಿಕಾರಿ ಮಲ್ಲಾನಾಯ್ಕ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಷಣ್ಮುಖಪ್ಪ, ಪಶು ಸಂಗೋಪನಾ ಇಲಾಖೆ ಉಪನಿರ್ದೇಶಕ ಡಾ. ಚಂದ್ರಶೇಖರ್ ಸುಂಕದ್, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿ ಮಲ್ಲಿಕಾರ್ಜುನ್ ಮಠದ್ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಶೋಷಿತ ಸಮುದಾಯಗಳಿಗೆ ಹೋರಾಟ ಅನಿವಾರ್ಯ

**ಜಗಳೂರು ತಾಲ್ಲೂಕಿನ ಚುನಾವಣಾ ಪ್ರಚಾರದಲ್ಲಿ ಪಕ್ಷೇತರ ಅಭ್ಯರ್ಥಿ ಜಿ.ಬಿ. ವಿನಯ್‌ಕುಮಾರ್**



ಜಗಳೂರು,ಏ.25- ತಾಲೂಕಿನ ವಿವಿಧ ಗ್ರಾಮ ಗಳಲ್ಲಿ ಇಂದು ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್ ಮತಯಾಚಿಸಿದರು.

ಜಗಳೂರು ತಾಲ್ಲೂಕಿನ ಹುಚ್ಚಂಗಿಪುರ, ದಿದ್ದಿಗಿ, ಬಸವನಕೋಟೆ, ಅಸಗೋಡು ಗ್ರಾಮಗಳಲ್ಲಿ ಸಾರ್ವ ಜನಿಕರನ್ನು ಉದ್ದೇಶಿಸಿ ಅವರು ಮಾತನಾಡಿದರು.

ಇಂದು ಶೋಷಿತ ಸಮುದಾಯಗಳಿಗೆ ಹೋರಾಟ ಅನಿವಾರ್ಯವಾಗಿದೆ. ನಮ್ಮ ಸಮುದಾಯಗಳನ್ನು ಕೇವಲ ಚುನಾವಣಾ ಸಂದರ್ಭದಲ್ಲಿ ಬಳಸಿಕೊಂಡು, ನಮ್ಮ ಆಸೆ, ಆಕಾಂಕ್ಷೆಗಳಿಗೆ ಸ್ಪಂದಿಸದೇ ನಮ್ಮನ್ನು ಅವಕಾಶಗಳಿಂದ ವಂಚಿತರನ್ನಾಗಿ ಮಾಡಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ನಾವೇ ಅವಕಾಶಗಳನ್ನು ಸೃಷ್ಟಿಸಿಕೊಂಡು, ಅವಕಾಶಗಳನ್ನು ಬಳಸಿಕೊಂಡು ನಮ್ಮ ಹಕ್ಕುಗಳನ್ನು ಪಡೆದುಕೊಂಡಾಗ ಮಾತ್ರ ನಮ್ಮಲ್ಲಿ ಸಮಾನತೆ ಕಾಣಲು ಸಾಧ್ಯ. ಹಟ್ಟಿ ಮಕ್ಕಳು ಶಿಕ್ಷಣದಿಂದ ವಂಚಿತರಾಗಲು ವ್ಯವಸ್ಥಿತವಾಗಿ ಸಂಚು ಮಾಡಲಾಗುತ್ತದೆ. ಆದ್ದರಿಂದ ನಾವು ಜಾಗೃತರಾಗಬೇಕಾಗಿದೆ. ತಳ ಸಮುದಾಯದ ಮಕ್ಕಳು ಉನ್ನತ ಮಟ್ಟದ ಅಧಿಕಾರಿಗಳಾಗಬೇಕು. ಉತ್ತಮ ಮಟ್ಟದ ಶಿಕ್ಷಣ ಪಡೆಯಬೇಕಾಗಿದೆ ಎಂದರು.

ಉಚ್ಚಂಗಿಪುರದ ರವಿ, ಗೋಣಿಬಸಪ್ಪ, ಗುಡದಪ್ಪ, ಬೀರಪ್ಪ, ಗುಡ್ಡಪ್ಪ, ಕೋಟೆಪ್ಪ, ಅನಂತ ಚಿಕ್ಕಬೂದಿಹಾಳ್ ಸೇರಿದಂತೆ, ನೂರಾರು ಕಾರ್ಯಕರ್ತರು, ಅಭಿಮಾನಿಗಳು ಹಾಜರಿದ್ದರು.

## ನಗರದಲ್ಲಿ ಇಂದು ವಿಶ್ವಕರ್ಮ ಸಮಾಜದಿಂದ ಸಾಮೂಹಿಕ ಉಪನಯನ, ವಿವಾಹ ಮಹೋತ್ಸವ

ವಿಶ್ವಕರ್ಮ ಸಮಾಜ ಸಂಘ ಹಾಗೂ ಜಿಲ್ಲೆಯ ವಿಶ್ವಕರ್ಮ ಸಮಾಜದ ಸಂಘ-ಸಂಸ್ಥೆಗಳ ಸಹಯೋಗದೊಂದಿಗೆ ಸಾಮೂಹಿಕ ಉಪನಯನ ಹಾಗೂ ವಿವಾಹ ಮಹೋತ್ಸವ ಕಾರ್ಯಕ್ರಮವನ್ನು ಇಂದು ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ವಿ.ಎಂ. ಕೊಟ್ರೇಶಾಚಾರ್ ತಿಳಿಸಿದ್ದಾರೆ.

ಕಾಳಿಕಾದೇವಿ ರಸ್ತೆಯ ಶ್ರೀ ಕಾಳಿಕಾಂಬ ವಿಶ್ವಕರ್ಮ ಕಲ್ಯಾಣ ಮಂಟಪದಲ್ಲಿ ಸಮಾರಂಭ ನಡೆಯಲಿದೆ. ಬೆಳಿಗ್ಗೆ 9.30 ರಿಂದ 10.30ರವರೆಗೆ ಯಜ್ಞೋಪವೀತ ಧಾರಣೆ ಹಾಗೂ ಬ್ರಹ್ಮೋಪದೇಶವಿದೆ. ಬೆಳಿಗ್ಗೆ 10.30ಕ್ಕೆ ಸಾಮೂಹಿಕ ವಿವಾಹಗಳು ಜರುಗಲಿವೆ.

11 ಗಂಟೆಗೆ ಏರ್ಪಾಡಾಗಿರುವ ಸಭಾ ಕಾರ್ಯಕ್ರಮವನ್ನು ಜವಳಿ ವರ್ತಕ ಬಿ.ಸಿ. ಉಮಾಪತಿ ಉದ್ಘಾಟಿಸಲಿದ್ದಾರೆ. ವಿಶ್ವಕರ್ಮ ಸಮಾಜ ಸಂಘದ ಅಧ್ಯಕ್ಷ ಬಸಾಪುರದ ಬಿ.ನಾಗೇಂದ್ರಾಚಾರ್ ಅಧ್ಯಕ್ಷತೆ ವಹಿಸಲಿದ್ದು, ಬಿ.ಎಲ್. ಸೀತಾರಾಮಾಚಾರ್, ಎನ್. ಪೂರ್ವಾಚಾರ್, ಬಿ.ಪಿ. ಜಗನ್ನಾಥ್, ಎಸ್. ರುದ್ರಾಚಾರ್ ಇತರರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

## ಹೆಚ್.ಎಸ್. ನಾಗರಾಜ್ ಮತ್ತವರ ಅಭಿಮಾನಿಗಳಿಗೆ ಕಾಂಗ್ರೆಸ್ ಸ್ವಾಗತ



ದಾವಣಗೆರೆ, ಏ. 25- ನಗರದ ರೇಣುಕ ಮಂದಿರದಲ್ಲಿ ನಡೆದ ಹೆಚ್.ಎಸ್. ನಾಗರಾಜ್ ಮತ್ತು ಅಭಿಮಾನಿಗಳ ಕಾಂಗ್ರೆಸ್ ಸೇರ್ಪಡೆ ಕಾರ್ಯಕ್ರಮದಲ್ಲಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರೊಂದಿಗೆ ಕಾಂಗ್ರೆಸ್‌ನ ಹಿರಿಯ ಮುಖಂಡರುಗಳಾದ ಎನ್.ಜಿ. ಪುಟ್ಟಸ್ವಾಮಿ, ಬಿ.ಹೆಚ್. ವೀರಭದ್ರಪ್ಪ, ದುಮ್ಮಿ ಚಮನ್ ಸಾಬ್, ಗಣೇಶ್ ಹುಲ್ಮನಿ ಇತರರಿದ್ದರು.

## ವೃದ್ಧರು, ವಿಕಲಚೇತನರಿಗೆ ಮನೆಯಿಂದಲೇ ಮತದಾನ



**ಮಲೇಬೆನ್ನೂರು**

ಮಲೇಬೆನ್ನೂರು, ಏ.25- ರಾಜ್ಯದಲ್ಲಿ ಮೇ 7 ರಂದು ಜರುಗಲಿರುವ 2ನೇ ಹಂತದ ಲೋಕಸಭಾ ಚುನಾವಣೆಗೆ ಪಟ್ಟಣದಲ್ಲಿರುವ 85 ವರ್ಷ ಮೇಲ್ಪಟ್ಟ ವೃದ್ದರು ಮತ್ತು ವಿಕಲಚೇತನರು ಗುರುವಾರ ಮನೆಯಿಂದಲೇ ಮತದಾನ ಮಾಡಿದರು. ಉಪ ತಹಶೀಲ್ದಾರ್ ಆರ್.ರವಿ, ಪುರಸಭೆ ಮುಖ್ಯಾಧಿಕಾರಿ ಎ. ಸುರೇಶ್, ಸೆಕ್ಟರ್ ಆಫೀಸರ್ ಉಮೇಶ್, ರೆಹಮಾನ್ ಮತ್ತು ಬಿಎಲ್ಓ ಪರಮೇಶ್ವರಪ್ಪ, ಶಾರದಮ್ಮ ಹಾಗೂ ಮತಗಟ್ಟೆ ಸಿಬ್ಬಂದಿ ವರ್ಗದವರು ಈ ವೇಳೆ ಹಾಜರಿದ್ದರು. ಹಳ್ಳಿಗಳಲ್ಲಿರುವ ವೃದ್ಧರು ಮತ್ತು ವಿಕಲಚೇತನರೂ ಮನೆಯಿಂದಲೇ ಮತದಾನ ಮಾಡಿದರು.

## ಕಂಪನಿ ನಿವೃತ್ತ ನಿರ್ದೇಶಕಿಗೆ 25 ಕೋಟಿ ರೂ. ವಂಚನೆ

ಮುಂಬೈ, ಏ. 25 -ಇಲ್ಲಿನ ಬಹುರಾಷ್ಟ್ರೀಯ ಕಂಪನಿಯೊಂದರ ನಿವೃತ್ತ ನಿರ್ದೇಶಕಿಗೆ ಸೈಬರ್ ವಂಚಕರು 25 ಕೋಟಿ ರೂ.ಗಳ ವಂಚನೆ ಮಾಡಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪೊಲೀಸ್ ಹಾಗೂ ಸಿಬಿಐ ಅಧಿಕಾರಿಗಳ ಸೋಗಿನಲ್ಲಿ ಬಂದ ವಂಚಕರು, ಅಕ್ರಮ ಹಣ ಪ್ರಕರಣದ ತನಿಖೆ ಮಾಡುತ್ತಿರುವುದಾಗಿ ಬೆದರಿಸಿ ಹಣ ವಸೂಲಿ ಮಾಡಿದ್ದಾರೆ. ಇದು ಇತ್ತೀಚಿನ ದಿನಗಳಲ್ಲಿ ವ್ಯಕ್ತಿಯೊಬ್ಬರನ್ನು ಗುರಿಯಾಗಿಟ್ಟುಕೊಂಡು ನಡೆಸಲಾದ ಅತಿ ದೊಡ್ಡ ಸೈಬರ್ ವಂಚನೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಮಾಜಿ ನಿರ್ದೇಶಕಿ ತನ್ನ ಹಾಗೂ ತಾಯಿಯ ಷೇರುಗಳನ್ನು ಮಾರಿ, ಮ್ಯುಚ್ಯುಯಲ್ ಫಂಡ್ ಹೂಡಿಕೆಯನ್ನು ವಾಪಸ್ ಪಡೆದು, ಬಂಗಾರದ ಮೇಲೆ ಸಾಲ ಪಡೆದು ವಂಚಕರಿಗೆ ಹಣ ನೀಡಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ. ಈ ವರ್ಷ ಫೆಬ್ರವರಿ 6ರಿಂದ ಆರಂಭವಾಗಿ ಎರಡು ತಿಂಗಳವರೆಗೆ ಈ ವಂಚನೆ ನಡೆದಿದೆ. ಟೆಲಿಕಾಂ ಇಲಾಖೆಯ ಅಧಿಕಾರಿಯ ಸೋಗಿನಲ್ಲಿ ವಾಟ್ಸ್‌ಆಪ್ ಕರೆ ಮಾಡಿದ ವಂಚಕರು, ಅವರ 3 ಮೊಬೈಲ್ ಸಂಖ್ಯೆಗಳನ್ನು ಡೀಆಕ್ಟಿವೇಟ್ ಮಾಡಲಾಗುತ್ತಿದೆ. ಈ ಬಗ್ಗೆ ಹಿರಿಯ ಅಧಿಕಾರಿಯ ಜೊತೆ ಮಾತನಾಡುವಂತೆ ತಿಳಿಸಿದರು.

ನಂತರ ಇನ್ನೋರ್ವ ವ್ಯಕ್ತಿ ಪೊಲೀಸ್ ಅಧಿಕಾರಿಯ ಸೋಗಿನಲ್ಲಿ ಮಾತನಾಡಿ, ಅಕ್ರಮ ಹಣ ದೂರು ಬಂದಿದೆ. ಮೊಬೈಲ್ ಸಂಖ್ಯೆ ಹಾಗೂ ಆಧಾರ್ ಕಾರ್ಡುಗಳು ಈ ಪ್ರಕರಣದಲ್ಲಿ ಸಂಬಂಧ ಹೊಂದಿವೆ ಎಂದು ಹೇಳಿದ. ಮತ್ತೆ, ಇನ್ನೋರ್ವ ವ್ಯಕ್ತಿ ಸಿ.ಬಿ.ಐ. ಅಧಿಕಾರಿ ಎಂದು ಹೇಳಿಕೊಂಡು ಕರೆ ಮಾಡಿ ಅಕ್ರಮ ಹಣ ಪ್ರಕರಣ ದಾಖಲಿಸುವುದಾಗಿ ಬೆದರಿಕೆ ಹಾಕಿದ.

ಪ್ರಕರಣದಿಂದ ಹೊರ ಬರಬೇಕಾದರೆ ತಾನು ಹೇಳುವ ಬ್ಯಾಂಕ್ ಖಾತೆಗೆ ಹಣ ಜಮಾ ಮಾಡಬೇಕು. ನಂತರದಲ್ಲಿ ಈ ಹಣ ವಾಪಸ್ ಬರಲಿದೆ ಎಂದು ಹೇಳಿದ್ದ. ನಂತರ ವಂಚಕರು ನಿರ್ದೇಶಕಿಯ ಹೆಸರಿನಲ್ಲೇ ಚಾಲ್ತಿ ಖಾತೆ ತೆರೆದು, ಅದರಲ್ಲಿ ಹಣ ಜಮಾ ಮಾಡುವಂತೆ ತಿಳಿಸಿದ್ದರು.

ಈ ಹಣ ರಿಸರ್ವ್ ಬ್ಯಾಂಕ್‌ಗೆ ಹೋಗಲಿದೆ. ಈ ಬಗ್ಗೆ ಸ್ಥಳೀಯ ಪೊಲೀಸರಿಂದ ರಸೀದಿ ಪಡೆದುಕೊಳ್ಳಬೇಕು ಎಂದು ತಿಳಿಸಲಾಗಿತ್ತು.

ಮಹಿಳೆ ಈ ಖಾತೆಗೆ 25 ಕೋಟಿ ರೂ. ಜಮಾ ಮಾಡಿದ್ದರು. ಆದರೆ, ಈ ಹಣ ವಾಪಸ್ ಬರಲಿಲ್ಲ. ನಂತರ ಮುಂಬೈ ಪೊಲೀಸರನ್ನು ಸಂಪರ್ಕಿಸಿದರು. ವಂಚನೆಯಾಗಿರುವುದು ತಿಳಿದು ದೂರು ದಾಖಲಿಸಿದ್ದಾರೆ. ಈ ಬಗ್ಗೆ ತನಿಖೆ ನಡೆಸುತ್ತಿರುವ ಮುಂಬೈ ಪೊಲೀಸರ ಅಪರಾಧ ದಳ, ಇದುವರೆಗೂ 31 ಬ್ಯಾಂಕ್ ಖಾತೆಗಳನ್ನು ಮುಟ್ಟುಗೋಲು ಹಾಕಿಕೊಂಡಿದೆ.

**ಮಾನ್ಯ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ದಾವಣಗೆರೆ,**

ಓ.ಎಸ್. ನಂ.: 132/2022

ವಾದಿಗಳು : ಶ್ರೀಮತಿ ಲಕ್ಕಮ್ಮ ಹಾಗೂ ಇತರರು. - ವಿರುದ್ಧ-
ಪ್ರತಿವಾದಿಗಳು : ಮಹಾರುದ್ರಪ್ಪ ಮತ್ತು ಇತರರು.
5ನೇ ಪ್ರತಿವಾದಿ : ಅಂಬಿಕಾ ಯಾನೆ ಮಂಜುಳಾ ಬಿನ್ ಮಹಾರುದ್ರಪ್ಪ, ವಯಸ್ಸು 23 ವರ್ಷ, ವಾಸ : ರಾಮಗೊಂಡನಹಳ್ಳಿ ಗ್ರಾಮ, ದಾವಣಗೆರೆ ತಾ|| ಮತ್ತು ಜಿಲ್ಲೆ.

**ಆದೇಶ 5 ನಿಯಮ 20 ಸಿ ಪಿ ಸಿ ಪ್ರಕಾರ ಪತ್ರಿಕಾ ಪ್ರಕಟಣೆ ಅರ್ಜಿ**

ಈ ಮೇಲ್ಕಂಡ ಕೇಸನ್ನು ವಾದಿಯರು ಪ್ರತಿವಾದಿಯರ ವಿರುದ್ಧ ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನ ಕೋರಿ ದಾವಾ ಹಾಕಿರುತ್ತಾರೆ. ಈ ಕೇಸಿನಲ್ಲಿ 5ನೇ ಪ್ರತಿವಾದಿಯು ಕೋರ್ಟು ಮೂಲಕ ಸಮನ್ಸ್ ಹೋದಾಗ್ಯೂ ಅವರು ಉದ್ದೇಶ ಪೂರ್ವಕವಾಗಿ ಜಾರಿ ಮಾಡಿಕೊಂಡಿರುವುದಿಲ್ಲ. 5ನೇ ಪ್ರತಿವಾದಿ ಅದೇ ವಿಳಾಸದಲ್ಲಿ ಇರುತ್ತಾರೆ.

ಈಗ ಪುನಃ 5ನೇ ಪ್ರತಿವಾದಿಗೆ ಕೋರ್ಟಿನವರು ಪತ್ರಿಕಾ ಪ್ರಕಟಣೆ ಮೂಲಕ ಸಮನ್ಸ್ ಮತ್ತು ನೋಟೀಸು ಜಾರಿ ಮಾಡಲು ಆದೇಶ ಮಾಡಿರುತ್ತಾರೆ. ಈ ಕೇಸಿನ ಮುದ್ದತ್ತನ್ನು ದಿನಾಂಕ 4.6.2024ಕ್ಕೆ ಇದ್ದು, 5ನೇ ಪ್ರತಿವಾದಿಯು ಆ ದಿನ ಖುದ್ದಾಗಿಯಾಗಲೀ ಅಥವಾ ವಕೀಲರ ಮೂಲಕವಾಗಲೀ ಬೆಳಿಗ್ಗೆ 11.00 ಗಂಟೆಗೆ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು. ತಪ್ಪಿದಲ್ಲಿ ಅವರ ಮೇಲೆ ಏಕತರ್ಪೆ ಆದೇಶ ಮಾಡಲಾಗುವುದು ಎಂದು ದಿನಾಂಕ : 23.4.2024 ರಂದು ಆದೇಶ ಮಾಡಿರುತ್ತದೆ.

ಈ ತಿಳುವಳಿಕೆಯನ್ನು ಇದೇ 2024ನೇ ಇಸ್ವಿ ಏಪ್ರಿಲ್ ಮಾಹೆ, 25ನೇ ತಾರೀಖಿನಂದು ನ್ಯಾಯಾಲಯದ ಮುದ್ರೆಯೊಂದಿಗೆ ಹಾಗೂ ನನ್ನ ಸಹಿಯೊಂದಿಗೆ ನೀಡಲಾಗಿದೆ.

ಸಹಿ/- ಶ್ರೀ ಷಣ್ಮುಖಪ್ಪ ಎಸ್.
ವಕೀಲರು, ದಾವಣಗೆರೆ.
ಮೊ. : 99728 01588

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು.
2ನೆ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ದಾವಣಗೆರೆ,

**In The Court of the Hon'ble IV Addl Civil Judge and JMFC at Davangere.**

**P & S.C. No. 05/2004**

Between : Smt. Ramija W/o. Late, H. Daud Sab @ H. Dawood, Aged about 64 years, Occ-House Hold work R/o. # 1953, 4th main, 2nd cross, Jali Nagara, Devaraj Urs Layout, Davangere-577 006.

Petitioner and Nil. - Respondents

**SUMMONS ISSUED UNDER OR.5 R.20 OF CPC BY WAY OF PAPER PUBLICATION**

Whereas the petitioner has filed the above petition for seeking relief of succession certificate of deceased Smt. Phirambi W/o. Husen Sab. If, any persons have interested for objections for taking the succession certificate of deceased Smt. Phirambi w/o. Husen Sab to appear before this Hon'ble court in person or through represnetative before this Hon'ble Court on 27.05.2024 at 11.00 am failing which the above case will be disposal of ex-parte without your absence.

Given under my hand seal of this Court on this : 25.4.2024.

Advocate for Petitioner Mr. Razvi Khan, Mr. Mahamad Hanif K. Sri. Madhu B.H. Smt. Pushpanjali Advocates, Davangere.

By ordr of this Court
Sd/- Chief Administrateive Officer Prl. Junior Civil Court and JMFC Davangere.

## ಜಿಲ್ಲಾ ಮಡಿವಾಳ ಸಮಾಜದಿಂದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರಗೆ ಬೆಂಬಲ



ದಾವಣಗೆರೆ, ಏ. 25 - ಜಿಲ್ಲಾ ಮಡಿವಾಳ ಸಮಾಜದಿಂದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರಿಗೆ ಬೆಂಬಲ ಸೂಚಿಸಲಾಯಿತು. ಸಭೆಯಲ್ಲಿ ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್, ಮಾಜಿ ಮುಖ್ಯ ಸಚೇತಕ ಎ.ಎಸ್. ಶಿವಯೋಗಿ ಸ್ವಾಮಿ, ಜಿಲ್ಲೆಯ ಯುವ ಮುಖಂಡ ಅನಿತ್, ಓಬಿಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ರಾಜ್ಯ ರೈತ ಮೋರ್ಚಾ ಉಪಾಧ್ಯಕ್ಷ ಲೋಕಿಕೆರೆ ನಾಗರಾಜ್, ಮಡಿವಾಳ ಸಮಾಜದ ಜಿಲ್ಲಾ ಉಪಾಧ್ಯಕ್ಷ ಮಂಜುನಾಥ್ ಡೈಮಂಡ್, ಜಿಲ್ಲಾ ಸಮಾಜದ ಯುವ ಮುಖಂಡ ಬಾತಿ ಶಂಕರ್, ಮಡಿವಾಳ ಮಹಿಳಾ ಜಿಲ್ಲಾ ಅಧ್ಯಕ್ಷರಾದ ನಾಗಮ್ಮ, ಜಿಲ್ಲಾ ಮಡಿಕಟ್ಟೆ ಅಧ್ಯಕ್ಷ ಕಿಶೋರ್ ಕುಮಾರ್ ಅವರ ಸಮ್ಮುಖದಲ್ಲಿ ಜಿಲ್ಲಾ ಮಡಿವಾಳ ಸಮಾಜದಿಂದ ಗಾಯತ್ರಿ ಸಿದ್ದೇಶ್ವರ ಅವರಿಗೆ ಬೆಂಬಲ ಸೂಚಿಸಿದರು. ಈ ಸಂದರ್ಭದಲ್ಲಿ ರತ್ನಮ್ಮ, ನಾಗಮ್ಮ, ಶಾರದಾ, ಶೋಭಾ, ಯಶೋಧ, ಜಾನಕಮ್ಮ, ಚಂದ್ರು, ತಿಲಕ್, ಮನೋಜ್, ಪ್ರಜ್ವಲ್, ಮಂಜುನಾಥ್, ಅಜಯ್, ಪರಶುರಾಮ್, ನಾಗರಾಜ್, ವೀರೇಶ್, ಜಗದೀಶ್, ನಿಂಗರಾಜ್, ಪರಶು, ಸುನಿಲ್, ಬಸವರಾಜ್, ಯಲ್ಲಪ್ಪ, ರಾಮಪ್ಪ, ಗುಡ್ಡಪ್ಪ ಹಾಗೂ ಇತರರು ಉಪಸ್ಥಿತರಿದ್ದರು.

## 22ನೇ ವಾರ್ಡ್‌ನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪ್ರಭಾ ಪರ ಮತಯಾಚನೆ



ದಾವಣಗೆರೆ, ಏ. 25- ಲೋಕಸಭೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ಗೆಲುವಿಗಾಗಿ ಮಹಾನಗರ ಪಾಲಿಕೆಯ 22ನೇ ವಾರ್ಡ್ ಯಲ್ಲಮ್ಮ ನಗರದ 11ನೇ ಕ್ರಾಸ್‌ನಲ್ಲಿ ವಾರ್ಡ್‌ನ ರವಿಸ್ವಾಮಿ, ನಾಗರಾಜಗೌಡ, ಅಡಾಣಿ ಸಿದ್ದಪ್ಪ, ಚಲುವಪ್ಪ, ಲಕ್ಷ್ಮಣರಾವ್ ಸಾಳಂಕಿ, ಕುಕ್ಕುವಾಡ ಅಂಜಿನಪ್ಪ, ಗುಡ್ಡಪ್ಪ ಎಂ., ಗೌಸ್, ಪ್ರಕಾಶ್ ರಾಜ್ ಎನ್.ಟಿ., ಮಂಜುನಾಥ ಎಂ.ಬಿ., ಪ್ರಕಾಶ್ ಎಂ., ಸಂಜು ಎಸ್., ಮಂಜುನಾಥ ಎಂ.ಎಸ್., ಅಸ್ಲಂ, ವಾಸು, ವಸಂತ್‌ಕುಮಾರ್, ಧರ್ಮರಾಜ್ ಎಸ್.ಟಿ., ಪೇಂಟ್ ಶಂಕರ್, ಪ್ರಸನ್ನ ಸಾಳಂಕಿ, ನಿರಂಜನ, ಪಾಲೇಶ್, ದಾದಾಪೀರ್ ಹೆಚ್., ಪೇಂಟ್ ಚಂದ್ರು, ಕಾರ್ತಿಕ್, ಇಮ್ತಿಯಾಜ್, ನಾಗರಾಜ್ ಟಿ., ಶೇಖರಪ್ಪ ಬಿ., ತೌಸಿಫ್, ಅಭಿ, ಸಂಜಯ್ ಕುಮಾರ್, ರಹಮತ್ ಉಲ್ಲಾ, ಗೋಪಾಲಕೃಷ್ಣ ಎಸ್., ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಡಾ. ಪ್ರಭಾ ಮಲ್ಲಿಕಾರ್ಜುನ್ ಗೆಲುವಿಗಾಗಿ ಮನೆ - ಮನೆಗಳಿಗೆ ತೆರಳಿ ಪ್ರಚಾರ ನಡೆಸಿದರು.

# ಚಿತ್ರದುರ್ಗದ ಕಾಂಗ್ರೆಸ್ ಸಭೆಯಲ್ಲಿ ಪ್ರಿಯಾಂಕ ಗಾಂಧಿ



ಚಿತ್ರದುರ್ಗ, ಏ.25- ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆ - ನ್ಯಾಯ ಸಂಕಲ್ಪ ರ‍್ಯಾಲಿ ನಿನ್ನೆ ಇಲ್ಲಿ ನಡೆಯಿತು. ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀಮತಿ ಪ್ರಿಯಾಂಕ ಗಾಂಧಿ ಅವರು ದೀಪ ಬೆಳಗಿಸುವುದರ ಮೂಲಕ ರ‍್ಯಾಲಿಯನ್ನು ಉದ್ಘಾಟಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಸಚಿವ ಹೆಚ್. ಆಂಜನೇಯ, ಮಾಯಕೊಂಡ ಕ್ಷೇತ್ರದ ಶಾಸಕ ಕೆ.ಎಸ್. ಬಸವಂತಪ್ಪ ಸೇರಿದಂತೆ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ಉರಿ ಬಿಸಿಲಿನೊಂದಿಗೆ ಎರಡನೇ ಹಂತದ ಮತದಾನ

ನವದೆಹಲಿ, ಏ. 25 – ಶುಕ್ರವಾರ ನಡೆಯಲಿರುವ ಎರಡನೇ ಹಂತದ ಮತದಾನಕ್ಕೆ ಉರಿ ಬಿಸಿಲೂ ಸಹ ಜೊತೆಯಾಗಲಿದೆ. ದೇಶದ ಹಲವು ಭಾಗಗಳಲ್ಲಿ ಮುಂದಿನ ಐದು ದಿನಗಳ ಕಾಲ ಬಿಸಿ ಗಾಳಿಯ ಪ್ರಕೋಪ ಇರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಅದರಲ್ಲೂ ಪಶ್ಚಿಮ ಬಂಗಾಳ ಹಾಗೂ ಒಡಿಶಾಗಳಲ್ಲಿ ಕೆಂಪು ಎಚ್ಚರಿಕೆ ನೀಡಲಾಗಿದೆ. ಬಿಹಾರ ಹಾಗೂ ಕರ್ನಾಟಕದ ಕೆಲ ಭಾಗಗಳಿಗೆ ಕಿತ್ತಳೆ ಎಚ್ಚರಿಕೆ ನೀಡಲಾಗಿದೆ.

ತ್ರಿಪುರ, ಕೇರಳ, ಕರಾವಳಿ ಕರ್ನಾಟಕ, ತಮಿಳುನಾಡು, ಪುದುಚೆರಿ, ಅಸ್ಸಾಂ, ಮೇಘಾಲಯ ಹಾಗೂ ಗೋವಾಗಳಲ್ಲಿ ಆರ್ದ್ರತೆಯಿಂದ ಹೆಚ್ಚು ಸಮಸ್ಯೆಯಾಗಲಿದೆ ಎಂದು ಇಲಾಖೆ ಹೇಳಿದೆ.


13 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ 88 ಲೋಕಸಭಾ ಕ್ಷೇತ್ರಗಳಿಗೆ ಶುಕ್ರವಾರ ಮತದಾನ ನಡೆಯಲಿದೆ. ಕೇರಳದ 20, ಕರ್ನಾಟಕದ 14, ರಾಜಸ್ಥಾನದ 13, ಉತ್ತರ ಪ್ರದೇಶ ಹಾಗೂ ಮಹಾರಾಷ್ಟ್ರಗಳ ತಲಾ ಎಂಟು, ಮಧ್ಯ ಪ್ರದೇಶದ ಆರು, ಬಿಹಾರ ಹಾಗೂ ಅಸ್ಸಾಂನ ತಲಾ ಐದು, ಛತ್ತೀಸ್‌ಘಡ ಹಾಗೂ ಪಶ್ಚಿಮ ಬಂಗಾಳದ ತಲಾ ಮೂರು, ತ್ರಿಪುರ, ಜಮ್ಮು ಮತ್ತು ಕಾಶ್ಮೀರ ಹಾಗೂ ಮಣಿಪುರದ ತಲಾ ಒಂದು ಕ್ಷೇತ್ರಗಳಲ್ಲಿ ಮತದಾನ ನಡೆಯಲಿದೆ.

ಕಳೆದ ಶುಕ್ರವಾರದಂದು ಮೊದಲ ಹಂತದ ಚುನಾವಣೆ ನಡೆದಿತ್ತು. 21 ರಾಜ್ಯಗಳ 102 ಕ್ಷೇತ್ರಗಳಿಗೆ ಶೇ.65.5ರಷ್ಟು ಮತದಾನವಾಗಿತ್ತು.

## ನಗರದಲ್ಲಿ ಇಂದು ಮಜ್ಜಿಗೆ ವಿತರಣೆ

ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಿಂದ 1 ತಿಂಗಳು ನಡೆಸುತ್ತಿರುವ ಮಜ್ಜಿಗೆ ವಿತರಣಾ ಕಾರ್ಯಕ್ರಮಕ್ಕೆ ಪ್ರತಿಭಾ ವಿಶ್ವನಾಥ್, ಶೋಭಾ ಹನುಮಂತಪ್ಪ, ಎಸ್. ಆರ್. ಮಲ್ಲಿಕಾರ್ಜುನ್ ಸೋಗಿ ನೆನಪಿನಲ್ಲಿ, ಮೇಧಾ ವೇದ ಮಾಧವ ಕುಲಕರ್ಣಿ ಅವರು ಇಂದಿನ ದಾನಿಗಳಾಗಿದ್ದಾರೆ.

## ಮಾಜಿ ಸಚಿವ ಹೆಚ್. ಸಿದ್ದವೀರಪ್ಪ ಪುತ್ರ ಡಾ. ಹಾಲಸ್ವಾಮಿ ನಿಧನ



ದಾವಣಗೆರೆ, ಏ. 25 – ಮಾಜಿ ಸಚಿವ ದಿ.ಹೆಚ್. ಸಿದ್ದವೀರಪ್ಪ ಅವರ ಪುತ್ರ ಡಾ. ಹೆಚ್. ಎಸ್. ಹಾಲಸ್ವಾಮಿ ಅವರು ನಿಧನರಾಗಿದ್ದಾರೆ. ಅವರಿಗೆ 87 ವರ್ಷ ವಯಸ್ಸಾಗಿತ್ತು.

ಮೈಸೂರಿನಲ್ಲಿ ವೈದ್ಯಕೀಯ ಪದವಿ ಪೂರೈಸಿದ ನಂತರ ಹಾಲಸ್ವಾಮಿ ಅವರು ಅಮೆರಿಕದ ಹೌಸ್ಟನ್‌ನಲ್ಲಿ ನೆಲೆಸಿದ್ದರು. ಕಳೆದ ಕೆಲ ದಿನಗಳಿಂದ ಅವರು ಅಸ್ವಸ್ಥರಾಗಿದ್ದರು.

# ಸಿದ್ಧಗಂಗಾ ಕಾಲೇಜಿಗೆ ಜೆಇಇ ಮೇನ್ಸ್‌ನಲ್ಲಿ ರಾಷ್ಟ್ರಮಟ್ಟದಲ್ಲಿ 64ನೇ ರ‍್ಯಾಂಕ್



ದಾವಣಗೆರೆ, ಏ. 25 - 2023-24ನೇ ಸಾಲಿನ ಜೆ.ಇ.ಇ. ಮೇನ್ಸ್ ಪರೀಕ್ಷೆಯಲ್ಲಿ ಸಿದ್ದಗಂಗಾ ವಿದ್ಯಾ ಸಂಸ್ಥೆಯ ವಿದ್ಯಾರ್ಥಿ ಮನು ಎಲ್.ಜೆ.ಅದ್ವಿತೀಯ ಸಾಧನೆ ಮಾಡಿ ಅಖಿಲ ಭಾರತ ಮಟ್ಟದ 64ನೇ ರ‍್ಯಾಂಕ್ ಪಡೆದಿರುತ್ತಾನೆ. ವಿದ್ಯಾರ್ಥಿಯ ಈ ಸಾಧನೆಗೆ ಸಂಸ್ಥೆಯ ಮುಖ್ಯಸ್ಥ ಡಾ. ಜಸ್ಟಿನ್ ಡಿಸೋಜಾ ಅಭಿನಂದಿಸಿದರು.

ಕಾಲೇಜಿನ ನಿರ್ದೇಶಕರಾದ ಡಾ. ಜಯಂತ್, ಅಧ್ಯಕ್ಷ ಪ್ರಶಾಂತ್ ಡಿ.ಎಸ್., ಕಾರ್ಯದರ್ಶಿ ಹೇಮಂತ್ ಡಿ.ಎಸ್ ಹಾಗೂ ಕಾಲೇಜು ಸಿಬ್ಬಂದಿ ವರ್ಗ ವಿದ್ಯಾರ್ಥಿಯ ಈ ಸಾಧನೆಗೆ ಅಭಿನಂದನೆ ಸಲ್ಲಿಸಿದ್ದಾರೆ.

# ಮುಸ್ಲಿಂ ಮೀಸಲಾತಿ ; ಬಿಜೆಪಿಯೇ ಸುಪ್ರಿಂನಲ್ಲಿ ಹೇಳಿಕೆ ನೀಡಿದೆ : ಸಿಎಂ

ಬೀದರ್, ಏ. 25 - ಮುಸ್ಲಿಮರಿಗೆ ನೀಡಲಾಗಿರುವ ಶೇ 4ರಷ್ಟು ಮೀಸಲಾತಿಯನ್ನು ಮುಂದುವರೆಸುತ್ತೇವೆ ಎಂದು ಸುಪ್ರೀಂಕೋರ್ಟ್‌ನಲ್ಲಿ ಹಿಂದಿನ ಬಿಜೆಪಿ ಸರ್ಕಾರವೇ ಹೇಳಿದೆ. ಈಗಲೂ ಮುಸ್ಲಿಮರ ಮೀಸಲಾತಿ ಹಿಂದಿನಂತೆ ಮುಂದುವರೆದಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಮುಸ್ಲಿಮ್ ಮೀಸಲಾತಿ ಕುರಿತು ಬಿಜೆಪಿ ಮಾಡುತ್ತಿರುವ ಟೀಕೆಗೆ ಉತ್ತರಿಸಿದ ಅವರು, ಹಿಂದೆ ಚಿನ್ನಪ್ಪ ರೆಡ್ಡಿ ಆಯೋಗವು ಮುಸ್ಲಿಮರಿಗೆ ಶೇ 4ರಷ್ಟು ಮೀಸಲಾತಿ ಕೊಡಬೇಕು ಎಂದು ಹೇಳಿತ್ತು. ಅದರಂತೆ ಸುಮಾರು 20 ವರ್ಷಗಳಿಂದ ಮುಸ್ಲಿಮರಿಗೆ ಶೇ 4ರಷ್ಟು ಮೀಸಲಾತಿ ಮುಂದುವರೆದಿದೆ. ಹಿಂದೆ ರಾಜ್ಯದಲ್ಲಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರವು, ನಾವು ಮುಸ್ಲಿಮರ ಮೀಸಲಾತಿ ಮುಂದುವರೆಸುತ್ತೇವೆ ಎಂದು ಸುಪ್ರೀಂಕೋರ್ಟ್‌ನಲ್ಲಿ ಹೇಳಿದೆ ಎಂದರು.

## ಈರುಳ್ಳಿ ರಫ್ತು ನಿರ್ಬಂಧ ಸಡಿಲಿಕೆ

ನವದೆಹಲಿ, ಏ. 25 – ಈರುಳ್ಳಿ ಮೇಲಿನ ರಫ್ತು ತೆರಿಗೆಯನ್ನು ಸಡಿಲಿಸಿರುವ ಕೇಂದ್ರ ಸರ್ಕಾರ, ನಿರ್ದಿಷ್ಟ ಪ್ರಮಾಣದ ಬಿಳಿ ಈರುಳ್ಳಿಯನ್ನು ಮೂರು ಬಂದರುಗಳಿಂದ ರಫ್ತು ಮಾಡಲು ಅನುಮತಿ ನೀಡಿದೆ. 2 ಸಾವಿರ ಟನ್‌ಗಳ ಈರುಳ್ಳಿ ರಫ್ತಿಗೆ ಅನುಮತಿ ನೀಡಲಾಗಿದೆ. ಮುಂದ್ರ, ಪಿಪವವ್ ಹಾಗೂ ನವ ಶೇವಾ ಬಂದರುಗಳಿಂದ ರಫ್ತಿಗೆ ಅನುಮತಿ ನೀಡಲಾಗಿದೆ.


ಸಿ.ವಿ. ರಾಮನ್ ಎಜುಕೇಷನಲ್ ಅಸೋಸಿಯೇಷನ್ (ರಿ.)
ಡಾ. ಸಿ.ವಿ. ರಾಮನ್ ಕಾಲೇಜ್
ಆಫ್ ಅಡ್ಮಿನಿಸ್ಟ್ರೇಶನ್ & ನೆಟ್‌ವರ್ಕ್ ಸೈನ್ಸಸ್
ದಿ॥ ಮೃತ್ಯುಂಜಯ
ಸಾಧನೆಗೈದ ಸಾಧಕರಿಗೆ
ಶುಭಾಶಯಗಳು
ನಮ್ಮ ಕಾಲೇಜಿನಲ್ಲಿ ನಡೆದ ALLSEC Allsec Technologies ಕಂಪನಿಯ ಕ್ಯಾಂಪಸ್ ಸಂದರ್ಶನದಲ್ಲಿ ಆಯ್ಕೆಯಾದ ನಮ್ಮೆಲ್ಲಾ ವಿದ್ಯಾರ್ಥಿಗಳಿಗೆ ಹಾಗೂ ಅವರ ಆಯ್ಕೆಗೆ ನೆರವು ನೀಡಿದ ಪ್ರಾಧ್ಯಾಪಕರಿಗೆ ಕಾಲೇಜಿನ ಆಡಳಿತ ಮಂಡಳಿಯಿಂದ ಹೃತ್ಪೂರ್ವಕ ಶುಭಾಶಯಗಳು





Best Wishes from College Management, Principal, Teaching & Non Teaching Staff



Admission Open
BCA, B.Com.
ಗ್ರಾಮಾಂತರ ಪೊಲೀಸ್ ಠಾಣೆ ಹತ್ತಿರ, ಕಾಲೇಜ್ ರೋಡ್, ನಿಟುವಳ್ಳಿ, ದಾವಣಗೆರೆ-577 004.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
94804 56888
99640 19347



ವಿವಾಹ ವಾರ್ಷಿಕೋತ್ಸವ : ಶುಭಾಶಯ



23ನೇ ವರ್ಷದ ವಿವಾಹ ವಾರ್ಷಿಕೋತ್ಸವದ ಸಂಭ್ರಮದಲ್ಲಿರುವ **ಮಾಗಡಿ ಎಂಟರ್‌ಪ್ರೈಸಸ್** ಮಾಲೀಕರಾದ **ಶ್ರೀ ನೀಲಕಂಠಪ್ಪ** ಮತ್ತು **ಶ್ರೀಮತಿ ಸವಿತಾ** ದಂಪತಿಗೆ ಹಾರ್ದಿಕ ಶುಭಾಶಯಗಳು.

ಬಂಧುಗಳು ಮತ್ತು ಸ್ನೇಹಿತರು



Ground & First Floor For Rent



AVAILABLE FOR RENT
SUITABLE FOR OFFICE/CLINIC/ BANK SIZE 45X55 FT.
(Once the Agreement is finalized, Building face lift will be done in this Pattern)

- Ground floor 3 Rooms+1 Big Hall with 4 Air Conditioners.
- 1 Big Hall with without Air Conditioner.
- 1 Italian Kitchen and outside one Bathroom.
- First Floor 2 Halls, 4 Rooms, Separate Entrance from West Side Staircase.
- Only Corporation Water Supply with Overhead Tank.
- Single Car Parking with Collapsible Gate.

7th Cross, 9th Main, P.J.Extension, Near Mruthunjaya Hospital, Davanagere.
Contact: 98804 66799, 99860 35969.



ತೆಲಗಿ ಶಾರದಮ್ಮ ನಿಧನ



ದಾವಣಗೆರೆ ತರಳಬಾಳು ಬಡಾವಣೆ, 7ನೇ ಕ್ರಾಸ್ 'ಬಿ' ತಿರುವಿನಲ್ಲಿರುವ ನಿವಾಸಿ ದಿವಂಗತ ತೆಲಗಿ ಬಸವರಾಜಪ್ಪ ಅವರ ಧರ್ಮಪತ್ನಿ **ಶ್ರೀಮತಿ ತೆಲಗಿ ಶಾರದಮ್ಮ** ಅವರು ದಿನಾಂಕ 25.04.2024ರ ಗುರುವಾರ ಸಂಜೆ 3 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 85 ವರ್ಷ ವಯಸ್ಸಾಗಿತ್ತು.

ಇಬ್ಬರು ಪುತ್ರರು, ಐದು ಜನ ಪುತ್ರಿಯರು ಹಾಗೂ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 26.4.2024ರ ಶುಕ್ರವಾರ ಮಧ್ಯಾಹ್ನ 12.15 ಕ್ಕೆ ಗಾಂಧಿನಗರದ ವೀರಶೈವ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ತೆಲಗಿ ರುದ್ರೇಶ್ ಮತ್ತು ದುಃಖತಪ್ತ ಕುಟುಂಬದವರು**
**ಮೊ : 98443 60701**



ಶ್ರೀ ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಕೃಪಾಪೋಷಿತ ಶ್ರೀ ವಿನಾಯಕ ಎಜುಕೇಶನ್ ಟ್ರಸ್ಟ್ (ರಿ)
SRI VINAYAKA EDUCATION TRUST (R.) ESTD 1980 DAVANGERE
ಅಥಣಿ ಸಂಯುಕ್ತ ಪದವಿ ಪೂರ್ವ ಕಾಲೇಜು, ದಾವಣಗೆರೆ
ವಿದ್ವತ್ ಮೆಡಿಕಲ್ & ಐಐಟಿ ಅಕಾಡೆಮಿ
SS LAYOUT, 'A' BLOCK, 10th CROSS, DAVANGERE - 577004
VIDHVATH EDUCATION TRUST (R.)
JEE MAINS ACHIEVERS-2024



JEE (Mains) 59 ALL INDIA RANK
ಗ್ರಾಮೀಣ ಪ್ರತಿಭೆಗೆ ರಾಷ್ಟ್ರ ಮಟ್ಟದ ಜೆ.ಇ.ಇ. ಪರೀಕ್ಷೆಯಲ್ಲಿ ಅತ್ಯುನ್ನತ ರ‍್ಯಾಂಕ್
DISTRICT 2nd TOPPER
SHIVARAJ S H

| PU RESULTS - 2024 | |
|---|---|
| COLLEGE RESULT | 99.63% |
| DISTINCTION | 141 |
| FIRST CLASS | 101 |
| HOSTEL RESULT | 100% |



98%
SHARAD KUMAR

EXCELLENCE IN
• NEET • JEE • K-CET • NDA
• JIPMER • AIIMS • AFMC

Admissions OPEN for 1ST PU 2024-25



HEMANTH V K, SHARAD KUMAR, RAVI SAGAR V R, LAKSHMIRANGANATH K M, CHANDAN P K, SANJAY S
KOMAL S, BASAMMA, KAVYA K, CHIRANTH B, AKSHAYA P C, GIRISH H S

Contact us:
9448391963 • 9113675955
9481182427 • 9964225169
Best Wishes From Management, Principal & Staff
VIDHVATH MEDICAL AND IIT ACADEMY


KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas